
ಕಲ್ಯಾಣ ಕಿರಣ

ಅಕ್ಟೋಬರ್-2010 ಬೆಲೆ ರೂ.10/-





ಧಾರವಾಡದ ಜಗನ್ಮಾತಾ ಅಕ್ಕಮಹಾದೇವಿ ಆಶ್ರಮದಲ್ಲಿ ದಿ.15-9-2010 ಬಸವ ಲಿಂಗೈಕ್ಯ ದಿನಾಚರಣೆಯನ್ನು ಪೀಠಾಧ್ಯಕ್ಷರಾದ ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿಯವರ ಸನ್ನಿಧಿಯಲ್ಲಿ ಕೆ.ಎಸ್. ಆಮೂರ ನೆರವೇರಿಸಿದರು, ಶ್ರೀಮತಿ ಬಸವಂತಿ ಇಂಗಳಳ್ಳಿ ಮುಖ್ಯ ಅತಿಥಿಗಳಾಗಿದ್ದರು.



ದಿ.26-9-2010 ರಂದು ಪ್ರಹ್ಲಾದ ಜೋಷಿ, ಸಂಸತ್ ಸದಸ್ಯರು ಇವರಿಂದ ಕಾರ್ಯಕ್ರಮ ಉದ್ಘಾಟನೆ

॥ ಓಂ ಶ್ರೀ ಗುರು ಬಸವ ಲಿಂಗಾಯ ನಮಃ ॥
866666

ಸಂಪುಟ-40 ಬಸವ ಶಕೆ -877 ಆಜೀವ ಸದಸ್ಯತ್ವ 1000 ರೂ.
ಸಂಚಿಕೆ-9 ಅಕ್ಟೋಬರ್-2010 ವಾರ್ಷಿಕ ಚಂದಾ 100/- ರೂ.

ಮಹಾಮನೆಯ ವೈಶಿಷ್ಟ್ಯ

ಬನ್ನಿ ಮಹಾಮನೆಯು ಕೈ ಬೀಸಿ ಕರೆಯುತಿದೆ
ಬಸವ ಸಂತಾನಕೆ ತಾಯ್ಮನೆಯ ನೀಡುತಿದೆ ॥ ಪ ॥
ಮಹಾಮನೆಯ ಭಕ್ತಿಸಿರಿ ಅನುಭವ ಮಂಟಪ
ಈ ಜಗದ ಐಸಿರಿ ಅರಿಯಿರಿ ನೀವೆಲ್ಲ ॥ ಅ. ಪ ॥

ನಮ್ಮಪ್ಪ ಬಸವಣ್ಣ ನಮ್ಮವ್ವ ನೀಲಮ್ಮ
ನಮ್ಮಣ್ಣ ಚಿನ್ಮಯ ಚನ್ನಬಸವಣ್ಣ
ನಮ್ಮ ದೊಡ್ಡಪ್ಪ ಅಲ್ಲಮಪ್ರಭುರಾಯ
ಪ್ರೇಮದ ಚಿಕ್ಕಪ್ಪ ಸಿದ್ಧರಾಮ ॥ 1 ॥

ಅಕ್ಕಮಹಾದೇವಿಯು ಪ್ರೇಮದ ಸೋದರಿ
ಚೊಕ್ಕ ಮಡಿವಾಳಯ್ಯ ಅಕ್ಕರೆಯ ಮಾವ
ಹರಳಯ್ಯ -ಮಧುವಯ್ಯ -ಮೋಳಿಗೆಯ ಮಾರಯ್ಯ ಈ
ಶರಣರೆಮ್ಮಯ ಬಂಧು ಬಳಗ ॥ 2 ॥

ಇಂಥ ಮಹಾಮನೆಯು ಜಗದೊಳೆಲ್ಲೂ ಇಲ್ಲ
ಅಂತೆಲ್ಲ ಧರ್ಮಗಳಲಿ ತಂದೆಯರು ಮಾತ್ರ
ಒಬ್ಬ ಗುರುವಿಗೆ ಅಲ್ಲಿ ಕೆಲವು ಶಿಷ್ಯಂದಿರು
ಬಸವ ಸೂರ್ಯನ ಸುತ್ತ ಶರಣ ಸಂದೋಹ ॥ 3 ॥

ಕಲ್ಯಾಣ ಮಹಾಮನೆಯು ಮರುಹುಟ್ಟು ಪಡೆದಿಹುದು
ಕೂಡಲಸಂಗಮದಿ ತಲೆ ಎತ್ತಿ ನಿಂತಿಹುದು
ದೇವನೊಬ್ಬನೆ ತಂದೆ ಮನುಜರೆಲ್ಲರು ಒಂದೆ
ಎಂಬ ವಿಶ್ವ ಪ್ರೇಮ ಸಾರುತಿಹುದು ॥ 4 ॥

ಹುಟ್ಟಿನಿಂದಲಿ ನೀವು ಏನೇ ಇರಬಹುದು
ಸದ್ಯದ ಗುಣದಲಿ ಹೇಗೇ ಇರಬಹುದು
ಶರಣ ಮೇಳಕೆ ಬರಲು ಪರುಷದ ಸ್ಪರ್ಶ
ಅರಿವಿನ ಹೊನಲಿನಲಿ ಹೊಂದುವಿರಿ ಹರ್ಷ ॥ 5 ॥

ಕೂಡಲ ಸಂಗಮ ಧರ್ಮ ಕ್ಷೇತ್ರದಲ್ಲಿ
ನಡೆಯುತಿಹ ಮೇಳವು ತೌರಿನ ಹಬ್ಬ
ಬಸವ ಕಲ್ಯಾಣದಿ ಶರಣರನು ಸೇರಿಸಿ
ಕಲ್ಯಾಣ ಪರ್ವವು ತರುತಿದೆ ಉಬ್ಬ ॥ 6 ॥

ಮಹಾಮನೆಯ ಐಸಿರಿಯ ನೋಡಲು ಬನ್ನಿ
ವಚನಾಮೃತದ ಬುತ್ತಿಯ ಉಣ್ಣಲು ಬನ್ನಿ
ತತ್ವದ ಜ್ಯೋತಿಗಳು ಬೆಳಗುತಿಹವಿಲ್ಲಿ
ಸಚ್ಚಿದಾನಂದನ ಒಲುಮೆ ಪಡೆಯಲು ಬನ್ನಿ ॥ 7 ॥

- ಮಾತಾಜಿ

★ ಕಲ್ಯಾಣ ಕಿರಣ ★

ಕಿರಣಗನ್ನಡಿ

ಮುಖಪುಟ: ಹುಬ್ಬಳ್ಳಿಯ ವಿಶ್ವೇಶ್ವರ ನಗರದಲ್ಲಿರುವ ಬಸವ ಮಂಟಪದಲ್ಲಿ ಸ್ಥಾಪಿಸಲಾದ ಬಸವ ಪುತ್ಥಳಿ

ಹೊದ್ದಿಕೆಯ ನಾಲ್ಕನೆಯ ಪುಟ: ಪೂಜ್ಯ ಸದ್ಗುರು ಮಾದೇಶ್ವರ ಸ್ವಾಮಿಗಳಿಗೆ ಗುರುವಂದನೆ ತಂದೆ.ಶರಣ. ಹೆಚ್.ಸಿ.ನಾಗರಾಜಪ್ಪ ಮತ್ತು ತಾಯಿ ಮಹಾದೇವಮ್ಮ ಅವರಿಂದ ಬಸವ ಧರ್ಮ ಪೀಠಕ್ಕೆ ಕಾಣಿಕೆ ಸಮರ್ಪಣೆ

ಅಕ್ಟೋಬರ್ ತಿಂಗಳಿನ ಹಬ್ಬ -ಹುಣ್ಣಿಮೆ -ಉತ್ಸವ

ಕಲ್ಯಾಣ ಕ್ರಾಂತಿ ಸಂಸ್ಮರಣೆ	ಅಕ್ಟೋಬರ್ -8
ವಚನ ಲೇಖನ ವ್ರತಾರಂಭ	ಅಕ್ಟೋಬರ್ -8
ಹರಳಯ್ಯ -ಮಧುವಯ್ಯ ಸಂಸ್ಮರಣೆ	ಅಕ್ಟೋಬರ್ -16
ಬಸವ ಧರ್ಮದ ವಿಜಯೋತ್ಸವ	ಅಕ್ಟೋಬರ್ -17

(ಅಕ್ಟೋಬರ್ 8ರಿಂದ ಪಾರಾಯಣ - ವಿಶ್ವಗುರು ಬಸವಣ್ಣ, ಅ-9 ಚನ್ನಬಸವಣ್ಣ, 10- ಅಲ್ಲಮ ಪ್ರಭು, 11-ಸಿದ್ಧರಾಮೇಶ್ವರ, 12-ಅಕ್ಕಮಹಾದೇವಿ, 13 -ಮಡಿವಾಳ ಮಾಚಿದೇವ -14-ಅಕ್ಕನಾಗಲಾಂಬಿಕೆ, 15-ಕಲ್ಯಾಣ ಕ್ರಾಂತಿ, 16- ಕಲ್ಯಾಣ ಕ್ರಾಂತಿ)

Kalyana Kirana -Reg No.19988/70. Monthly Magazine Edited And Published by Pujya Mate Kasturidevi on behalf of Vishwa kalyana Mission Charitable Trust, Basava Mantapa, 2035, 20th Main, 2nd Block, Rajajinagar, Bangalore-10.
Ph: 8970898205, 7760627640, 8892912123

ಸಂಪಾದಕೀಯ : - ಮಾತಾಜಿ

1. ದಿಢೀರ್ ಸಿದ್ಧಪುರುಷರ ಜನನ

ಸೆಪ್ಟಂಬರ್ ತಿಂಗಳಿನಲ್ಲಿ ಎರಡು ವಿಶೇಷವಾದ ಪ್ರಸಂಗಗಳು ನಮ್ಮ ಗಮನಕ್ಕೆ ಬಂದು ಅಚ್ಚರಿಯನ್ನು ಹುಟ್ಟಿಸಿದವು. ಭಾರತ ದೇಶದಲ್ಲಿ ಅವತಾರ ಪುರುಷರು, ಸಿದ್ಧಪುರುಷರು ಅಸಂಖ್ಯಾತ. ಈಗ ಆಗಿ ಹೋಗಿರುವವರು ಮಾತ್ರವಲ್ಲದೆ ದಿನ ನಿತ್ಯ ಒಬ್ಬರು ಹುಟ್ಟುವರು. ಭಾರತೀಯ ಜನಸಂಖ್ಯೆ ಮೀರಿ ಈ ಸಿದ್ಧಪುರುಷರ ಜನಸಂಖ್ಯೆ ಬೆಳೆಯುತ್ತಲಿದೆ. ಇವರಿಗೆ ಜನ್ಮ ನೀಡುವವರು ಧಾರ್ಮಿಕ ಗುರುಗಳೆಂಬ ತಾಯಿ, ರಾಜಕಾರಣಿ ಎಂಬ ತಂದೆ.

ಧಾರವಾಡದಲ್ಲಿ ದಿ. 25, ಹುಬ್ಬಳ್ಳಿಯಲ್ಲಿ ದಿ. 26ರಂದು ಕಾರ್ಯಕ್ರಮ ಇದ್ದ ನಿಮಿತ್ತ ಧಾರವಾಡದ ಜಗನ್ಮಾತಾ ಅಕ್ಕಮಹಾದೇವಿ ಆಶ್ರಮದಲ್ಲಿ ವಾಸ್ತವ್ಯ ಮಾಡಿದ್ದೆ. ಶರಣ. ಕಮ್ಮಾರ್ ಅವರು ತಮ್ಮ ತೋಟವನ್ನು ತೋರಿಸಲು ಕಾರಿನಲ್ಲಿ ಕರೆದೊಯ್ದರು. ಮಾರ್ಗಮಧ್ಯೆ ಹದ್ದಿನ ಗುಡ್ಡ ಎಂದು ಬರುತ್ತದೆ. ಬಹಳ ವರ್ಷಗಳಿಂದ ಅಲ್ಲೊಂದು ಸಣ್ಣ ಗುಡಿ ಇದ್ದು, ಒಳಗೊಂದು ನಂದಿ ಇತ್ತು. ನಾವುಗಳು ವಾಕ್ ಹೋಗಿ ಗುಡ್ಡ ಹತ್ತಿ ಅಲ್ಲಿ ಕುಳಿತು ಬರುತ್ತಿದ್ದುದುಂಟು. ಒಂದು ದಿವಸ ಪೂಜ್ಯ ಅಪ್ಪಾಜಿ ಹೇಳಿದ್ದರು, "ಸ್ವಯಂ ಪ್ರೇರಣೆಯಿಂದ ಸನ್ಯಾಸಿಯಾಗಬೇಕು ಎಂದುಕೊಂಡಾಗ (ಸಂಪ್ರದಾಯ ಮಠಗಳವರು ಭಕ್ತವರ್ಗ (ಪಂಚಮ ಸಾಲಿ)ದವರಿಗೆ ಜಂಗಮ ದೀಕ್ಷೆ ಕೊಡುವುದಿಲ್ಲ ಎಂದಾಗ, ಹೊಳೆಯ ನೀರಿಗೆ ದೊಣ್ಣೆನಾಯಕನ ಅಪ್ಪಣೆ ಯಾಕೆ? ಎಂದು) ನಾನು ಕಾವಿ ವಸ್ತ್ರಗಳನ್ನು ತಂದು, ಗುರು ಬಸವಣ್ಣನವರನ್ನೇ ಗುರುವನ್ನಾಗಿ ಭಾವಿಸಿ ಜ್ಞಾನ ಸನ್ಯಾಸ ಸ್ವೀಕರಿಸಿದುದು ಇದೇ ಜಾಗದಲ್ಲಿಯೆ." ಹೀಗಾಗಿ ಆ ಜಾಗ ಆಕರ್ಷಣೆಯ ಕೇಂದ್ರ ಬಿಂದುವಾಗಿತ್ತು. ಒಂದು ಎತ್ತರದ ಪ್ರದೇಶವಾಗಿ ಸುತ್ತಮುತ್ತಲಿನ ಪರಿಸರಕ್ಕೆ ದೃಶ್ಯ ಗೋಪುರವಾಗಿತ್ತು. ಇಡೀ ಗುಡ್ಡದ ತುಂಬ ಬಿಲ್ಪತ್ರೆ ಗಿಡಗಳು ಹಬ್ಬಿಹರಡಿದ್ದವು.

ಇಂದು ನೋಡಿದರೆ ಜಿ.ಸಿ.ಬಿಗಳ ಸದ್ದು, ಗುಡ್ಡದ ಮೇಲೊಂದು ತಗಡಿನ ಶೆಡ್ಡು, ಗುಡ್ಡದ ಮೇಲೆ ವಾಹನ ಏರಲು ಒಂದು ರಸ್ತೆ, ಉಳವಿ ರಸ್ತೆ ಪಕ್ಕ ಪ್ಲಾಸ್ಟಿಕ್ ಷೀಟ್‌ಗಳ ಅಂಗಡಿಗಳು, ಚಾ ದ ಅಂಗಡಿ. ಒಬ್ಬಸ್ವಾಮಿಗಳ ಎತ್ತರವಾದ ಕಟೌಟ್. ಅದರಲ್ಲಿ ಕೈಮುಗಿದು ಕೊಂಡ ನಿಂತ ಓರ್ವ ರಾಜಕಾರಣಿ-ಭಕ್ತಿಧುರಂಧರ. (ಬಹುಶಃ ಮುಂದಿನ ಚುನಾವಣೆಯಲ್ಲಿ ಸಂಸತ್ ಸದಸ್ಯರಾಗಲು ಪೂರ್ವಭಾವಿ ತಯಾರಿಯನ್ನೂ ನಡೆಸಬಹುದು) ಏನಿದು? ಎಂದು ಕೇಳಿದಾಗ, ಯಾರೋ ಸಿದ್ಧಪುರುಷರು 45 ದಿವಸಗಳಿಂದ ಅನ್ನ ಆಹಾರ, ನೀರು, ಗಾಳಿ ಸಹ ಇಲ್ಲದೆ ಎಲ್ಲ ಬಂದ್ ಮಾಡಿಸಿ ಕುಳಿತಿದ್ದಾರಂತೆ. ದಿ. 28ರಂದು ಅನುಷ್ಠಾನ ಮುಕ್ತಾಯದ ದಿನ ಲಕ್ಷಾಂತರ ಜನ ಸೇರಲಿರುವುದಾಗಿ ವಿಪರೀತ ಪ್ರಚಾರವಾಗುತ್ತಿದೆ.

ಧಾರವಾಡ ನಗರ ಸುತ್ತಮುತ್ತಲೂ ಸ್ವಾಮಿಗಳ ಪೋಸ್ಟರ್ ಅದರಲ್ಲಿ ಕಿಂಕರತೆಯಿಂದ ಕೈಮುಗಿದು ನಿಂತ ರಾಜಕಾರಣಿ. ರಾಜಕಾರಣಿಗಳು ನಿಷ್ಕಾಮ ಕರ್ಮಿಗಳಲ್ಲ. ಅವರು ವ್ಯಯಿಸುವ ಪ್ರತಿಯೊಂದು ಪೈಸೆಯೂ ಒಂದು ಇನ್‌ವೆಸ್ಟ್‌ಮೆಂಟ್. ಒಮ್ಮೆಲೇ ಆ ಜಾಗ ಸಿದ್ಧಭೂಮಿ ಯಾಗಿದೆ. ಅಲ್ಲಿ ಉಪವಾಸ(?) ಕುಳಿತ ಸ್ವಾಮಿಗಳು ಸಿದ್ಧಪುರುಷರಾಗಿ ಬಿಟ್ಟಿದ್ದರೆ. ಬ್ಯಾನರ್‌ನಲ್ಲಿ ಶಿಲಾಲಿಂಗೋದ್ಭವರಾದ ರೇಣುಕಾಚಾರ್ಯರೂ ಉಂಟು. ಏನೇನೂ ಸತ್ಯವಿಲ್ಲದೆ, ಸತ್ವವಿಲ್ಲದೆ ಹೇಗೆ ಸುಳ್ಳಿನ ಸರಪಳಿಯನ್ನು ಹೆಣೆದು ಸತ್ಯವೆಂದು ಸಾಬೀತು ಮಾಡಲು ಹೊರಟಿದ್ದಾರೆ ಎಂದು

ಆಶ್ಚರ್ಯವೆನಿಸುತ್ತದೆ. ಇಷ್ಟು ದಿವಸ ಭೂಮಿಯನ್ನು ಅತಿಕ್ರಮಣ ಮಾಡುವ ದೇವತೆಗಳೆಂದರೆ ದಕ್ಷಿಣಭಾರತದಲ್ಲಿ ಗಣಪತಿ, ಹನುಮಂತ, ಶನಿ ಆಗಿದ್ದರೆ ಉತ್ತರ ಭಾರತದಲ್ಲಿ ಶಿವಲಿಂಗ. ಈ ಸಾಲಿಗೆ ಈಗ ಶಿಲಾಲಿಂಗೋದ್ಭವರೂ ಸೇರಿದಂತಾಯಿತು. 21ನೆಯ ಶತಮಾನದಲ್ಲಿ ಸಹ ಜನರು ವಿಚಾರಶಕ್ತಿಯನ್ನು ಬೆಳೆಸಿಕೊಂಡಿಲ್ಲ; ಅನ್ನ-ನೀರು - ಗಾಳಿಯೂ ಇಲ್ಲದೆ ಯಾರಾದರೂ 45 ದಿವಸ ಇರಬಲ್ಲರೆ? ಅನ್ನಾಹಾರವಿಲ್ಲದೆ ಇರಬಹುದು ಎಂದುಕೊಂಡರೂ ಅವರಿಂದ ಕಲಿಯಬಹುದಾದ ಆದರ್ಶವೇನು? ವ್ಯಕ್ತಿತ್ವ ವಿಕಾಸ ಮಾಡುವ ಜ್ಞಾನ ಸಂದೇಶಕೊಡುವವರನ್ನು ಅನುಸರಿಸಬೇಕು, ಅನುಕರಿಸಬೇಕು ಎಂಬುದನ್ನು ತಿಳಿಯದೆ ಉಘೋ ಉಘೋ ಎಂದು ಎಲ್ಲಿಗೆ ಬೇಕಾದರೂ ನುಗ್ಗುವ ಜನತೆಯ ಮೌಢ್ಯತೆ ಕಂಡಾಗ ಬಹಳ ದುಃಖವೆನಿಸುತ್ತದೆ.

ಅದೇ ರೀತಿ ಸೆಪ್ಟೆಂಬರ್ ಎರಡನೆ ವಾರದಲ್ಲಿ ಒಂದು ಕಡೆ ಹೋಗಬೇಕಾಯಿತು. ಕಾರ್ಯಕ್ರಮ ವ್ಯವಸ್ಥಾಪಕರು ಎರಡು ಪ್ರತ್ಯೇಕ ಕರಪತ್ರ ತಯಾರಿಸಿದ್ದಾರೆ. ನಮಗೆ ಕಳಿಸಿದ್ದರಲ್ಲಿ ಶ್ರಾವಣ ಮಾಸದ ಕಾರ್ಯಕ್ರಮದ ಸಮಾರೋಪ ಸಮಾರಂಭ ಎಂದಿದೆ. ಪ್ರತ್ಯೇಕ ಕರಪತ್ರದಲ್ಲಿ ಕಾಲಭೈರವ ಯಜ್ಞದ ವಿವರಗಳಿವೆ. ದಿನ ಪತ್ರಿಕೆಗಳಲ್ಲಿ "ಕಾಲಭೈರವ ಯಜ್ಞದ ಸಮಾರೋಪಕ್ಕೆ ಮಾತೆ ಮಹಾದೇವಿಯವರು." ಎಂದು ಪ್ರಕಟವಾಗಿದೆ. ರಾಷ್ಟ್ರೀಯ ಬಸವ ದಳಗಳವರಿಗೆಲ್ಲ ಆಘಾತ. ಮಾತಾಜಿ ಇಂಥ ಕಾರ್ಯಕ್ರಮಕ್ಕೆ ಏಕೆ ಒಪ್ಪಿದರು? ಯಾಕೆ ಬರಬೇಕು? ಎಂದು ಫೋನ್ ಮೇಲೆ ಫೋನ್. ಒಮ್ಮೆ ಒಪ್ಪಿಕೊಂಡ ಮೇಲೆ ತಪ್ಪಿಸುವ ಪರಿಪಾಠವಿಲ್ಲ; ಏನು ಮಾಡುವುದು? ಆದಿ ಶರಣರು ಯಜ್ಞ-ಯಾಗ, ಪ್ರಾಣಿ ಬಲಿ ನಡೆಯುತ್ತಿದ್ದ ಜಾಗಕ್ಕೆ ಹೋಗಿ ಗಣಾಚಾರವನ್ನು ಪ್ರದರ್ಶಿಸುತ್ತಿದ್ದರು. ಪ್ರತಿಭಟನೆ ಮಾಡುತ್ತಿದ್ದರು. ನಾನು ಹೋಗಬೇಕೋ ಬೇಡವೊ ಎಂಬ ಸಂದಿಗ್ಧತೆ. ಆದರೂ ಶಿಷ್ಟಾಚಾರಕ್ಕೆ ಅನುಗುಣವಾಗಿ ಹೋದೆ. ಗೌರವ ಪೂರ್ವಕವಾಗಿ ಸ್ವಾಗತಿಸಿದರು; ಸನ್ಮಾನ ಮಾಡಿದರು.

ಕಾರ್ಯಕ್ರಮದ ಪ್ರಾಯೋಜಕರು ಸ್ಥಳದ ಮಹಿಮೆ ಕುರಿತು ಹೊಗಳಿದರು. 10ನೆಯ ಶತಮಾನದ ಸಿದ್ಧಪುರುಷರ ಗದ್ದುಗೆಯಂತೆ. ಮಹಿಮಾಶಾಲಿ ಸ್ಥಳವಂತೆ ಅಲ್ಲಿ ಬಂದು ಗದ್ದುಗೆಗೆ 5 ಸುತ್ತು ಪ್ರದಕ್ಷಿಣೆ ಮಾಡಿದರೆ ಎಲ್ಲಾ ಇಷ್ಟಾರ್ಥಗಳು ನೆರವೇರುವವಂತೆ. ಆ ಜಾಗಕ್ಕೊಬ್ಬ ಮಠಾಧಿಪತಿಯನ್ನೂ ನೇಮಿಸಿದ್ದಾರೆ. ಅವರದು ಅದೇ ಆಲಾಪ. "ನೀವಿನ್ನು ಯಾರೂ ಚಿಂತಿಸಬೇಡಿ. ಯಾವ ಕಾಯಿಲೆಯೇ ಇರಲಿ, ಬೆನ್ನು ನೋವು, ಸೊಂಟ ನೋವು, ಕಾಲು ನೋವು ಏನೇ ಇರಲಿ. ಅದರ ಚಿಂತೆ ಬಿಡಿರಿ. ಅಜ್ಜನವರ ಗದ್ದುಗೆಗೆ 5 ಸುತ್ತು ಪ್ರದಕ್ಷಿಣೆ ಹಾಕಿರಿ ಸಾಕು. ವೈಚಾರಿಕತೆಯನ್ನು ವಿಡಂಬಿಸುವ ಈ ವರ್ಣನೆ ಕೇಳಲು ನನಗೆ ಅತೀವ ಹಿಂಸೆಯಾಗುತ್ತಿತ್ತು, ಶಿಷ್ಟಾಚಾರಕ್ಕಾಗಿ ಸುಮ್ಮನೆ ಕುಳಿತುಕೊಳ್ಳಬೇಕಾಯಿತು.

ನಂತರ ನನ್ನ ಆಶೀರ್ವಚನದಲ್ಲಿ ಹೇಳಿದೆ, "ಈ ಕಾರ್ಯಕ್ರಮದ ಪ್ರಾಯೋಜಕರು ಕೆಲವು ಮಾನವೀಯ ಕಾರ್ಯಗಳನ್ನು ಉದಾಃ ವೃದ್ಧಾಶ್ರಮ ತೆರೆಯುವುದು ಮುಂತಾಗಿ ಹಮ್ಮಿಕೊಂಡಿದ್ದಾರೆ. ಮಾಡಲಿ, ವೃದ್ಧಾಶ್ರಮ, ಅನಾಥಾಲಯ ಮುಂತಾದವು ಇಂದಿನ ಅಗತ್ಯಗಳಾಗಿವೆ. ಅನ್ನದಾಸೋಹ ಸಹಿತ 21 ದಿವಸಗಳ ಕಾಲ ನಡೆಸಲಾಗಿದೆ. ಇದೂ ಸಂತೋಷದ ಸಂಗತಿ. ಆದರೆ 21 ದಿವಸ ಕಾಲಭೈರವ ಯಜ್ಞ ಎಂದು ಮಾಡಿದ್ದು, ಈಗ ಅವೈಜ್ಞಾನಿಕವಾಗಿ ಗದ್ದುಗೆಯ ಮಹಿಮೆ ಹೊಗಳಿದ್ದು ಮಾತ್ರ ಖಂಡನಾರ್ಹ. ಕೇವಲ ಗದ್ದುಗೆಯನ್ನು ಸುತ್ತಿದ ಮಾತ್ರಕ್ಕೆ ಕಾಯಿಲೆಗಳು ವಾಸಿಯಾಗುವುದಿದ್ದರೆ ಆಸ್ಪತ್ರೆಗಳಿಗಾಗಿ ಸರ್ಕಾರವು ದುಡ್ಡು ಖರ್ಚು ಮಾಡುವುದೇಕೆ? ಇಂಥಾ ಮಾತುಗಳನ್ನು ಕೇಳಿ ಜನರು ಮೂಢರಾಗಿ ಕಾಯಿಲೆ ಬಂದಾಗ ವೈದ್ಯರ ಬಳಿಗೆ ಹೋಗದೆ ಗುಡಿ, ಗದ್ದುಗೆಗಳನ್ನು ಸುತ್ತಲು ತೊಡಗಿ ಮೃತ್ಯುವನ್ನು ಸನಿಹಕ್ಕೆ ಬರಮಾಡಿ

ಕೊಳ್ಳುವುದುಂಟು. ಒಮ್ಮೆ ಒಂದು ಹಳ್ಳಿಯಲ್ಲಿ ಹುಡಗನೊಬ್ಬ ತುಕ್ಕುಹಿಡಿದ ಮೊಳೆ ತುಳಿದ. ಅವನ ತಾಯಿ ತಂದೆ ತಕ್ಷಣ ವೈದ್ಯರಿಗೆ ತೋರಿಸುವುದು ಬಿಟ್ಟು ಯಾವುದೋ ಗುಡಿಗೆ ಒಯ್ದು ಮಲಗಿಸಿದರು. ಅವನಿಗೆ ಧನುರ್ವಾಯು (ಸೆಟೆರೋಗ) ಬಂದು ಸತ್ತುಹೋದ. ಇಂಥಾ ಮೂಢನಂಬಿಕೆಗಳನ್ನು ಬೆಳೆಸಲು ಹೋಗಬಾರದು." ಎಂದು ನನ್ನ ಭಾಷಣದಲ್ಲಿ ಹೇಳಿದೆ. ಕಾರ್ಯಕ್ರಮ ಪ್ರಾಯೋಜಕರು, ಮಠಾಧೀಶರು ಹೇಳಿದ ಗದ್ದುಗೆಯ ಮಹಿಮೆಯ ವರ್ಣನೆ ಎಷ್ಟು ಪ್ರಭಾವ ಬೀರಿತ್ತೆಂದರೆ ರಾಷ್ಟ್ರೀಯ ಬಸವ ದಳದಲ್ಲಿ 15 ವರ್ಷ ವೇದಿಕೆಯ ಮೇಲೆ ಓಡಾಡಿದ ಓರ್ವ ಮಹಿಳೆ ಹೋಗಿ ಗದ್ದುಗೆಯನ್ನು 5 ಸುತ್ತು ಹಾಕಿ ಬಂದಿದ್ದಾರೆ ಎಂದ ಮೇಲೆ ಮೂಢನಂಬಿಕೆ ಯಲ್ಲಿಯೇ ಹೊರಳಾಡುವ ಅಜ್ಞ ಜನರ ಪಾಡೇನಾದೀತು?

ನಮ್ಮನ್ನು ಕರೆಸಿದವರಿಗೆ ಬೇಸರ ಆಗಿರಬಹುದು. ಆದರೆ ಹೇಳುವುದು ನನ್ನ ಆದ್ಯ ಕರ್ತವ್ಯವಾಗಿತ್ತು, ಇಲ್ಲವಾದರೆ ನಾನು ಅಂಥ ಸ್ಥಳಕ್ಕೆ ಬರಬಾರದಾಗಿತ್ತು, ಅಲ್ಲಿ ಏನು ನಡೆದಿದೆ (ಕಾಲಭೈರವಯಜ್ಞ) ಎಂಬುದು ಗೊತ್ತಿಲ್ಲದೆ ಬಂದು ಮೌನವಾಗಿದ್ದು, ಅಥವಾ ಪ್ರಾಯೋಜಕರ ಮುಖಸ್ತುತಿ ಮಾಡಿ ಬಂದಿದ್ದರೆ ನನ್ನ ತತ್ವನಿಷ್ಠೆಗೆ ಚ್ಯುತಿ ಬರುತ್ತಿತ್ತು. ಲಿಂಗಾಯತರು ಅನೇಕರು ಹೋಮ-ಹವನ, ಯಜ್ಞ-ಯಾಗಮಾಡುತ್ತ, ಮಾಡಿಸುತ್ತ ಬಹುದೊಡ್ಡ ಅಪರಾಧ, ಸ್ವಧರ್ಮ ದ್ರೋಹ ಮಾಡುತ್ತಿದ್ದಾರೆ. ಹೊಟ್ಟೆಯೊಳಗಣ ಹಸಿವಿನಗ್ನಿಗೆ ಆಹಾರ ಪದಾರ್ಥ ಹಾಕುವ ಅನ್ನ ದಾಸೋಹವು ಬಸವಧರ್ಮದ ಆಚಾರ. ಬೆಲೆಬಾಳುವ ವಸ್ತುಗಳನ್ನು, ತಿನ್ನುಣ್ಣುವ ಆಹಾರ, ದವಸ ಧಾನ್ಯವನ್ನು ಅಗ್ನಿದೈವವೆಂದು ಬೆಂಕಿಯಲ್ಲಿ ಹಾಕುವ ಯಜ್ಞ-ಯಾಗಾದಿಗಳು ಲಿಂಗಾಯತರಿಗೆ ನಿಷಿದ್ಧ; ಕೇವಲ ಲಿಂಗಾಯತರಿಗೆ ಮಾತ್ರವಲ್ಲ ಮಾನವೀಯತೆಗೇ ನಿಷಿದ್ಧ! "ಸಹಸ್ರ ಮಂತ್ರ ಜಪ, ಲಕ್ಷ ಮಂತ್ರ ಜಪ -ಹೀಗೆ ಮಂತ್ರ ಜಪ ಇಟ್ಟುಕೊಳ್ಳಿರಿ. ಹೊಸ ಹೊಸ ಮೂಢ ನಂಬಿಕೆ ಗಳನ್ನು ಬೆಳೆಸಬೇಡಿರಿ." ಎಂದು ಕಾರ್ಯಕ್ರಮ ಸಂಯೋಜಕರಿಗೆ ಹೇಳಿದೆ.

ರಾಜಕೀಯ ಪ್ರಭಾವ ಬೆಳೆಸಿಕೊಳ್ಳಲಾಗಲಿ, ಅಜ್ಞ ಜನರನ್ನು ಮೌಢ್ಯತೆಗೆ ಕೆಡವಿ ಆರ್ಥಿಕ ಲಾಭ ಮಾಡಿಕೊಳ್ಳುವುದಾಗಲಿ, ಸರ್ಕಾರಿ ಜಮೀನನ್ನು ವಶಪಡಿಸಿಕೊಳ್ಳಲು ಹೊಸ ಸಿದ್ಧಪುರುಷರನ್ನು, ಹೊಸ ಗದ್ದುಗೆಗಳನ್ನು ಸೃಷ್ಟಿ ಮಾಡುವುದಾಗಲಿ ಮಾನವೀಯತೆ, ವೈಚಾರಿಕತೆಗೆ, ರಾಷ್ಟ್ರಕ್ಕೆ ಮಾಡುವ ಅಪಚಾರವೇ ಸರಿ!

2. ಅಲಹಾಬಾದ್ ಹೈಕೋರ್ಟ್ ತೀರ್ಪು

ಸುಮಾರು 60 ವರ್ಷಗಳ ಕಾಲ ನಡೆದು ಎಲ್ಲರನ್ನೂ ಆತಂಕ ಮತ್ತು ಉದ್ವಿಗ್ನತೆಗೆ ಈಡು ಮಾಡಿದ್ದ ಅಯೋಧ್ಯೆಯ ವಿವಾದ ಕುರಿತು ತೀರ್ಪು ದಿ. 30-9-2010ರಂದು ಹೊರಬಿದ್ದು ಎಲ್ಲರ ಮನಸ್ಸಿನ ಕಾರ್ಮೋಡ ಸರಿದು ನಿರಾಳವಾಯಿತು. ಒಂದು ವಿವಾದಿತ ಸ್ಥಳಕ್ಕೆ ಅದು ರಾಮ ಜನ್ಮಭೂಮಿ ಎಂದು ಹಿಂದು ಸಂಘಟನೆಯವರು, ಅದು ಬಾಬರಿ ಮಸೀದಿ ಎಂದು ಇಸ್ಲಾಮಿಕ್ ಸಂಘಟನೆಯವರು, ತಮಗೂ ಅದರಲ್ಲಿ ಪಾಲಿದೆ ಎಂದು ನಿರ್ಮೋಹಿ ಅಖಾಡಾದವರು ಬೇಡಿಕೆ ಸಲ್ಲಿಸಿದ್ದರು. ಮೊದಲು ರಾಮಮಂದಿರವಿತ್ತು, ಅದನ್ನು ಕೆಡವಿ ಬಾಬರನು ಮಸೀದಿ ಕಟ್ಟಿದ್ದು. ಹೀಗಾಗಿ ಇದು ಮೂಲತಃ ರಾಮಮಂದಿರ ಎಂದು ಹಿಂದು ಸಂಘಟನೆಯವರ ವಾದ. ಎಲ್ಲರ ಅಹವಾಲನ್ನು ಆಲಿಸಿದ್ದಲ್ಲದೆ 3 ನ್ಯಾಯಮೂರ್ತಿಗಳ ತಂಡವು ಎಲ್ಲರಿಗೂ ಸಮಾನವಾದ ಹಕ್ಕುಗಳನ್ನು ನೀಡಿದೆ. ರಾಮನ ವಿಗ್ರಹವನ್ನು ಸ್ಥಳಾಂತರಿಸಬೇಕಾಗಿಲ್ಲ, ಅಲ್ಲಿಯೇ ಬೃಹತ್ ಮಂದಿರ ಕಟ್ಟಬಹುದು. ನಂತರದ ಭಾಗದಲ್ಲಿ ಪ್ರಾರ್ಥನೆ ಮಾಡಲು ಮಸೀದಿ ಕಟ್ಟಬಹುದು. ಅದರ ನಂತರದ ಭಾಗವು ನಿರ್ಮೋಹಿ ಅಖಾಡಾದವರಿಗೆ ಎಂದು ಕೋರ್ಟ್

ಹೇಳಿದೆ. ಒಂದು ರೀತಿಯ ರಾಜಿ ಪಂಚಾಯಿತಿಯನ್ನು ನ್ಯಾಯಾಲಯವೇ ಮಾಡಿದೆ.

ಮಂದಿರ -ಮಸೀದಿ ಅಕ್ಕಪಕ್ಕದಲ್ಲಿದ್ದರೆ ಯಾವಾಗಲೂ ಸಮಸ್ಯೆಯೇ! ಮಥುರಾದಲ್ಲಿ ಒಂದೇ ಗೋಡೆ ಅಡ್ಡ. ಸದಾ ಪೋಲೀಸರ ಸರ್ಪಗಾವಲು ಇದರಿಂದ ಭಯಗ್ರಸ್ತ ವಾತಾವರಣ. ಪ್ರತಿ ಮುಸಲ್ಮಾನನೂ ಭಯೋತ್ಪಾದಕನೆಂಬಂತೆ ಕಾಣುವ ಮನೋಭಾವ ಇದರಿಂದ ಬೆಳೆಯುತ್ತದೆ. ಅಯೋಧ್ಯೆ ಶ್ರೀ ರಾಮನ ಜನ್ಮಸ್ಥಾನ. ವಿವಾದಿತ ಪ್ರದೇಶ ಜನ್ಮಸ್ಥಳ. ಅದು ಬದಲಾಗಲು ಸಾಧ್ಯವಿಲ್ಲ. ಆದ್ದರಿಂದ ಮುಸಲೀಮ್ ಜನರು ಸುಪ್ರೀಂಕೋರ್ಟಿಗೆ ಹೋಗಿ ಸಮಯ ಹರಣ ಮಾಡುವ ಬದಲು ಅಲಹಾಬಾದ್ ಹೈಕೋರ್ಟ್ ತೀರ್ಪನ್ನು ಮನ್ನಿಸಿ ಮಸೀದಿಯನ್ನು ಬೇರೆ ಕಡೆ ಹೊಸದಾಗಿ ಕಟ್ಟಿಸಿಕೊಳ್ಳುವುದು ಉಚಿತ.

ದೇಶದ ಹಿತದೃಷ್ಟಿಯಿಂದ ಸಹಬಾಳ್ವೆ ಅತ್ಯವಶ್ಯಕ. ಈ ತೀರ್ಪು ಯಾರಿಗೂ ಅನ್ಯಾಯ ಮಾಡಿಲ್ಲ. ಇದು ಯಾರ ಗೆಲುವೂ ಅಲ್ಲ, ಯಾರ ಸೋಲು ಅಲ್ಲ, ಆದ್ದರಿಂದ ತೀರ್ಪನ್ನು ಎಲ್ಲರೂ ಒಪ್ಪಿಕೊಂಡು ನ್ಯಾಯಾಲಯದ ತೀರ್ಪಿನ ಅನುಸಾರ ಮಂದಿರ, ಮಸೀದಿಗಳನ್ನು ಕಟ್ಟಿಕೊಂಡು ಸುಖ -ಶಾಂತಿಗಳಿಂದ ಇರಲಿ ಎಂದು ಹಾರೈಸುವೆ.

3. ಪೂಜ್ಯ ಪೇಜಾವರ ಶ್ರೀಗಳ ಸಲಹೆ ಅವೈಜ್ಞಾನಿಕ

ಪೂಜ್ಯ ಪೇಜಾವರ ಮಠಾಧೀಶರಾದ ಶ್ರೀ ಶ್ರೀ ವಿಶ್ವೇಶ್ವರ ತೀರ್ಥ ಸ್ವಾಮೀಜಿಯವರು ಪ್ರಗತಿಪರ ಚಿಂತಕರು. ಪೂರ್ಣ ಪ್ರಮಾಣದ ಪ್ರಗತಿಪರ ಚಿಂತನೆ ಮಾಡಲು ಅವರು ಆಶ್ರಯಿಸಿರುವ ವೈದಿಕ (ಹಿಂದು) ಧರ್ಮ ಮತ್ತು ಅವಲಂಬಿಸಿರುವ ವೈಷ್ಣವ ಸಂಪ್ರದಾಯ ಪೂಜ್ಯರನ್ನು ಬಿಡುತ್ತಿಲ್ಲ. ಉಳಿದ ಹಿಂದು ಮಠಾಧೀಶರು ಮತ್ತು ಲಿಂಗಾಯತ ಮಠಾಧೀಶರು ತೋರುವ ನಿಶ್ಚಿಂತ, ನಿರ್ಲಿಪ್ತ ಸ್ಥಿತಿಯ ದೃಷ್ಟಿಯಿಂದ ನೋಡಿದಾಗ ಪೂಜ್ಯ ಪೇಜಾವರ ಶ್ರೀಗಳ ಸಾಮಾಜಿಕ ಧಾರ್ಮಿಕ ಬದ್ಧತೆ, ಹಿಂದು ಸಮಾಜ-ಧರ್ಮಗಳನ್ನು ರಕ್ಷಿಸಬೇಕೆಂಬ ಕಳಕಳಿ ನಿಜಕ್ಕೂ ಮೆಚ್ಚುವಂತಹವು. ದಲಿತರ ಕೇರಿಯಲ್ಲಿ ಪಾದಯಾತ್ರೆ, ಅವರಿಗೆ ವೈಷ್ಣವ ದೀಕ್ಷೆ ಕೊಡಲು ಸಿದ್ಧ ಎಂಬ ಘೋಷಣೆ, (ಮಾಧ್ವ) ಬ್ರಾಹ್ಮಣರೇ ಹೆಚ್ಚಾಗಿ ಇರುವ ಮೈಸೂರಿನ ಕೃಷ್ಣಮೂರ್ತಿ ಪುರಂದಲ್ಲಿರುವ ಬ್ರಾಹ್ಮಣರ ಕೇರಿಯಲ್ಲಿ ಪೂಜ್ಯ ಮಾದಾರ ಚನ್ನಯ್ಯ ಸ್ವಾಮಿಗಳವರ ಪಾದಯಾತ್ರೆಯ ಸಮಯದಲ್ಲಿ ಬ್ರಾಹ್ಮಣರಿಂದ ಗೌರವಪೂರ್ವಕ ಸ್ವಾಗತಕ್ಕೆ ಪ್ರೇರಣೆ - ಈ ಎಲ್ಲವುಗಳಿಂದ ಪೂಜ್ಯ ಪೇಜಾವರ ಶ್ರೀಗಳು ಬಹಳಷ್ಟು ಸುದ್ದಿ ಆದರು. ಜೊತೆ ಜೊತೆಗೇ ಪೂಜ್ಯ ಮಾದಾರ ಚನ್ನಯ್ಯ ಸ್ವಾಮಿಗಳೂ ಪ್ರಚಾರವನ್ನು ಪಡೆದರು.

ಭಾರತ ದೇಶವನ್ನು ಕುಷ್ಠರೋಗದಂತೆ ಕಾಡುತ್ತಿರುವುದು ಜಾತೀಯತೆ ಮತ್ತು ಅದರ ಕಹಿ (ವಿಷ)ಫಲವಾದ ಅಸ್ಪೃಶ್ಯತೆ. ಇದಕ್ಕೆ ಯಾರನ್ನು ದೂರುವುದು? ವೈದಿಕ ಶಾಸ್ತ್ರಗಳಾದ ಶ್ರುತಿ, ಸ್ಮೃತಿಗಳು ಅದರಲ್ಲೂ ಮುಖ್ಯವಾಗಿ ಮನುಸ್ಮೃತಿ ಜಾತಿವಾದ ಮತ್ತು ಅಸ್ಪೃಶ್ಯತೆಯ ಬೇರನ್ನು ಎಷ್ಟು ಆಳವಾಗಿ ಇಳಿಸಿದೆ ಎಂದರೆ. ಈ ಹೆಬ್ಬಾವಿನ ಅಪ್ಪುಗೆಯಿಂದ ಭಾರತೀಯರ ಮನಸ್ಸು ಹೊರಬರಲಾರದಷ್ಟು ದಿಗ್ಬಂಧನಕ್ಕೆ ಒಳಗಾಗಿವೆ. ತಾವು ಯಾವ ಅಪರಾಧವನ್ನು ಮಾಡುತ್ತಿದ್ದೇವೆ ಎಂಬುದರ ಅರಿವಿಲ್ಲದೆಯೇ ಜನರು ಮೂಢರಾಗಿ ವರ್ತಿಸುತ್ತಿದ್ದಾರೆ. ವಿದೇಶಿ ಧರ್ಮಗಳಾದ ಇಸ್ಲಾಂ ಮತ್ತು ಕ್ರೈಸ್ತ ಧರ್ಮಗಳು ಈ ದೇಶವನ್ನು ಪ್ರವೇಶಿಸಿದವು. ಇಲ್ಲಿದ್ದ ಜಾತಿವಾದ ಮತ್ತು ಅಸ್ಪೃಶ್ಯತೆ ಅವುಗಳಿಗೆ ಹುಲುಸಾಗಿ ಆಹಾರ ಒದಗಿಸಿದವು. ಹೆಣ್ಣು (ವಿವಾಹ), ಹೊನ್ನು (ಹಣದ ಆಮಿಷ), ಮಣ್ಣು (ಸಾಮಾಜಿಕ ಸ್ಥಾನಮಾನ)ಗಳ ಕಾರಣದಿಂದ ಮತಾಂತರ

ಗೊಂಡವರ ಸಂಖ್ಯೆಗಿಂತ ಆ ಧರ್ಮಗಳಿಗೆ ಅಸ್ಪೃಶ್ಯತೆಯ ಸಂಕಟ ತಾಳಲಾರದೆ ಮತಾಂತರ ಹೊಂದಿದವರ ಸಂಖ್ಯೆಯೇ ಬಹಳ. ಮತ್ತು ಹಾಗೆ ಹೊರಹೋದ ಬಹುಪಾಲು ಜನರಲ್ಲಿ ಹಿಂದು ಸಮಾಜದ ಬಗ್ಗೆ ರೋಷವೂ ಬೆಳೆಯಿತು. ಇದರ ಫಲವೇ ಕಾಶ್ಮೀರ ಸಮಸ್ಯೆ. ಈ ಮತಾಂತರವು ರಾಷ್ಟ್ರದ ಛೇದನಕ್ಕೂ ಕಾರಣವಾಗುತ್ತಲಿದೆ. ಹೀಗಾಗಿ ಪ್ರಜ್ಞಾವಂತರಿಗೆಲ್ಲರಿಗೂ ದೇಶದ ಅಖಂಡತೆಯ ಚಿಂತೆ.

ಪರಿಹಾರವನ್ನೇ ಕಾಣದ ಸಮಸ್ಯೆ ಇದಾಗಿದೆ. ಈ ಸಮಸ್ಯೆಗೆ ಕಾರಣವಾದ ಸ್ಮೃತಿ ಆಧಾರಿತ ವೈದಿಕ ಹಿಂದು ಧರ್ಮ ಏನೂ ಮಾಡಲಾರದೆ ನಿಸ್ಸಹಾಯಕವಾಗಿದೆ. ಈ ಸಮಸ್ಯೆಗೆ ಪರಿಹಾರ ಹುಡುಕಲೆಂದೇ ಹುಟ್ಟಿದ ಬೌದ್ಧ, ಜೈನ, ಲಿಂಗಾಯತ, ಸಿಖ್ ಧರ್ಮಗಳ ಸಮಾಜಗಳು ಸ್ಥಗಿತಗೊಂಡಿವೆ, ಮೂಲದ ಚಲನಶೀಲತೆಯನ್ನು ಕಳೆದುಕೊಂಡಿವೆ. ಹೀಗಾಗಿ ಪೂಜ್ಯ ಪೇಜಾವರ ಶ್ರೀಗಳು ಆದಿಯಾಗಿ ಅನೇಕರು ಚಟಪಟಿಸುತ್ತಿದ್ದಾರೆ. ಅವರ ಕಳಕಳಿ ಮತ್ತು ಸಾಮಾಜಿಕ ಬದ್ಧತೆ ಮೆಚ್ಚುವಂತೆ ಇದ್ದರೂ ಅವರು ಸೂಚಿಸುತ್ತಿರುವ ಪರಿಹಾರ ಮಾತ್ರ ಅವೈಜ್ಞಾನಿಕ ಮತ್ತು ಅತಾರ್ಕಿಕ. ಶ್ರೀಗಳು ದಲಿತರ ಕೇರಿಯಲ್ಲಿ ಅಡ್ಡಾಡಿ ಬರುವರು. ಅಂದ ಮಾತ್ರಕ್ಕೆ ಎಲ್ಲ ಹಿಂದುಗಳ ತಲೆಯಲ್ಲಿ ಕುಳಿತಿರುವ ಅಸ್ಪೃಶ್ಯತೆಯ ಆಚರಣೆ ತೊಲಗಿ ಹೋಗದು. ಪ್ರಜ್ಞಾವಂತ ಬ್ರಾಹ್ಮಣರು ಜಾತ್ಯತೀತ ರಾಗಿದ್ದರೆ ಮೂಢ ಬ್ರಾಹ್ಮಣೇತರರು ಜಾತಿವಾದಿಗಳಾಗಿದ್ದಾರೆ. ಪೂಜ್ಯ ಮಾದಾರ ಚನ್ನಯ್ಯ ಸ್ವಾಮಿಗಳನ್ನು ಉದಾರವಾದಿ ಬ್ರಾಹ್ಮಣರು ಸ್ವಾಗತಿಸಿ, ಗೌರವಿಸಿದ್ದರೂ ಅಜ್ಞಾನಿ ಜನರಲ್ಲಿ ಆ ಮನೋಭಾವ ಬರದು. ಈ ಜಾತಿವಾದ ಮತ್ತು ಅಸ್ಪೃಶ್ಯತೆಯ ಆಚರಣೆ ಕಂಡು ಪ್ರಜ್ಞಾವಂತರಿಗೆ ವಿಪರೀತ ಮಾನಸಿಕ ಹಿಂಸೆ. ಇದರ ಪರಿಣಾಮದಿಂದ ದೇಶವು ಹೊಂದುತ್ತಿರುವ ಆಂತರಿಕ ಕ್ಷೋಭೆ ಕಂಡು ನಿಸ್ಸಹಾಯಕತೆಯ ನಿಟ್ಟುಸಿರು ಬಿಡುವಂತಾಗುತ್ತದೆ. ನದಿಯ ದಂಡೆಯಲ್ಲಿ ನಿಂತ ಮನುಷ್ಯ, ಪ್ರವಾಹದ ಸೆಳವಿಗೆ ಸಿಕ್ಕಿ ಅತಿ ಆತ್ಮೀಯರು ಕೊಚ್ಚಿಕೊಂಡು ಹೋಗುವಾಗ ಪಡುವ ಯಾತನೆ ಉಂಟಾಗುತ್ತದೆ. ಏಸುಕ್ರಿಸ್ತನನ್ನು ಶಿಲುಬೆಗೆ ಏರಿಸುವಾಗ, "ಅವರು ಏನು ತಪ್ಪು ಮಾಡುತ್ತಿದ್ದಾರೆಂದು ಅರಿಯರು. ದೇವರೆ ಅವರನ್ನು ಕ್ಷಮಿಸು" ಎಂದು ಏಸುವು ಕೇಳಿಕೊಂಡಂತೆ ಅಸ್ಪೃಶ್ಯತೆ ಆಚರಣೆ ಮಾಡುವವರು ಏನು ಅಪರಾಧ ಮಾಡುತ್ತಿದ್ದಾರೆ ಎಂಬುದನ್ನು ಅರಿಯದ ಅಜ್ಞರು.

ಲಿಂಗಾಯತ ಧರ್ಮ ಹುಟ್ಟಿದ್ದೇ ಸಮಾನತೆ ಸಾರಲು; ಗುರು ಬಸವಣ್ಣನವರು ವೈದಿಕ ಧರ್ಮವನ್ನು ತ್ಯಜಿಸಿ ಹೊಸ ಧರ್ಮವನ್ನು ಸ್ಥಾಪಿಸಿದ್ದೇ ಜಾತಿಯತೆ ಮತ್ತು ಅಸ್ಪೃಶ್ಯತೆಯ ನಿವಾರಣೆಗಾಗಿ. ಆದರೆ ಅನೇಕ ಕಡೆ ಲಿಂಗಾಯತರು ಬ್ರಾಹ್ಮಣರನ್ನು ಮೀರಿಸುವಷ್ಟು ಮಡಿವಂತರು, ಜಾತಿವಾದಿಗಳೂ ಆಗಿರುವುದು ವಿರೋಧಾಭಾಸವಲ್ಲವೆ? ಲಿಂಗಾಯತ ಮಠಾಧೀಶರು ಹೋಮ-ಹವನ, ಯಜ್ಞ- ಯಾಗವನ್ನು ಮಠಗಳಲ್ಲಿ ಮಾಡಿಸಲು ತೊಡಗಿದ ಮೇಲೆ ಇನ್ನು ಅವರಿಗೆ ತಮ್ಮ ಧರ್ಮವನ್ನು ಬೋಧಿಸುವ ನೈತಿಕ ಹಕ್ಕಾದರೂ ಉಳಿದೀತೆ? ಒಂದು ಊರಿನಲ್ಲಿ ದಲಿತರಿಗೆ ಸಾಮಾಜಿಕ ಬಹಿಷ್ಕಾರ ಹಾಕಿದರು. ಆ ಊರಿನಲ್ಲಿ ಇದ್ದವರು ಪ್ರಧಾನವಾಗಿ ಲಿಂಗಾಯತರು ಅಂದಾಗ ಕ್ರಾಂತಿಕಾರಿ ಮಾತನಾಡಲು ನಮಗಾದರೂ ಮಾನಸಿಕ ಸ್ಥೈರ್ಯ ಉಳಿದೀತೆ? ದಲಿತರನ್ನು ಕಡೆಗಣಿಸಿ ಅವರು ಇಸ್ಲಾಂ, ಕ್ರೈಸ್ತ ಮತಾವಲಂಬಿಗಳಾದರೆ ಕಾಶ್ಮೀರ, ಮೀಜೋರಾಂ- ಮೇಘಾಲಯಗಳಲ್ಲಿ ಉಂಟಾಗುವ ಸಮಸ್ಯೆ ನಮ್ಮ ಮನೆಯ ಬಾಗಿಲಿಗೂ

ಬರುತ್ತದೆ ಎಂಬ ಅರಿವು ಜಾತಿವಾದಿ ಹಿಂದುಗಳಲ್ಲಿ, ಲಿಂಗಾಯತರಲ್ಲಿ ಉಂಟೆ? ಎಲ್ಲ ಮುಸಲೀ-ಮರೂ ಮತಾಂಧರಲ್ಲ ದೇಶ ವಿರೋಧಿಗಳಲ್ಲ, ಎಲ್ಲ ಕ್ರೈಸ್ತರೂ ದೇಶ ಒಡೆಯಬೇಕು ಎನ್ನುವವರಲ್ಲ. ಉಗ್ರವಾದಿಗಳು, ಭಯೋತ್ಪಾದಕರು ಸ್ವಲ್ಪವೇ ಜನ, ಆದರೂ ಅವರು ಸಾತ್ವಿಕರನ್ನು ದುರ್ಬಲಗೊಳಿಸುವರು, ದೇಶವನ್ನು ಆತಂತ್ರಗೊಳಿಸುವರು.

ಈ ಹಿನ್ನೆಲೆಯಲ್ಲಿ ಆಲೋಚಿಸುವ ಪೂಜ್ಯ ಪೇಜವರ ಶ್ರೀಗಳ ಕಳಕಳಿ ಅಭಿನಂದನಾರ್ಹ. ಆದರೆ ಇದಕ್ಕೆ ಪರಿಹಾರವಾಗಿ ಅವರು ಸೂಚಿಸಿರುವ ವೈಷ್ಣವ ದೀಕ್ಷೆಯ ಪರಿಕಲ್ಪನೆ ಅವೈಜ್ಞಾನಿಕ. ಈ ದೀಕ್ಷೆಯಿಂದ ದಲಿತರಿಗೆ ಪೂಜೆಯ ಹಕ್ಕಾಗಲಿ, ಮಠ ಪೀಠಾಧಿಪತಿಗಳಾಗುವ ಸವಲತ್ತಾಗಲಿ ಸಿಗದು. ದಲಿತರಲ್ಲೇ ವೈಷ್ಣವ ದಲಿತರೆಂಬ ಒಂದು ಗುಂಪು ತಯಾರಾಗಬಹುದು. ಕೃಷ್ಣ ದೇವಾಲಯ ದಲ್ಲಿ ಕೃಷ್ಣ ದರ್ಶನಕ್ಕೆ ದಲಿತರಿಗೆ ಅವಕಾಶ ಮಾಡಿಕೊಡಲು ಸಿದ್ಧರಿರುವರಂತೆ, ಕೃಷ್ಣನ ಪೂಜೆಗೆ ಅವಕಾಶ ನೀಡರಂತೆ! ಇಂತಹ ಸೌಲಭ್ಯಕ್ಕಾಗಿ ದಲಿತರೇಕೆ ವೈಷ್ಣವರಾಗಬೇಕು? ಲಿಂಗಾಯತ ಧರ್ಮವನ್ನು ಸ್ವೀಕಾರ ಮಾಡಿದರೆ ಪೂಜೆಗೂ ಅವಕಾಶ ಉಂಟು. ಸಾಮಾಜಿಕ ಸಮಾನತೆ, ಸಹಪಂಕ್ತಿ ಭೋಜನ ಮಠ-ಪೀಠಗಳ ಅಧಿಕಾರದ ಹಕ್ಕು - ಈ ಎಲ್ಲವೂ ಸಾಧ್ಯವಾಗುವುದು. ಆಗ ಕಾಡುವ ಮತ್ತೊಂದು ಸಮಸ್ಯೆ ಎಂದರೆ ವಿವಾಹ ಸಂಬಂಧ. ಲಿಂಗಾಯತರು ತಮ್ಮ ತಮ್ಮಲ್ಲಿಯೇ ಬಣಜಿಗರು, ಸಾದರು, ರೆಡ್ಡಿ ಎಂದು ಗುಂಪುಗೂಡುವ ಜನರು ದಲಿತ ಮತಾಂತರಿ ಗಳೊಡನೆ ವಿವಾಹ ಸಂಬಂಧ ಬೆಳೆಸುವರೆ? ಪ್ರೇಮ ವಿವಾಹಗಳು ಅಡ್ಡಿ ಆತಂಕವಿಲ್ಲದೆ ಸಾಗ ಬಹುದಾದರೂ ಒಪ್ಪಿ ಮಾಡುವ ವಿವಾಹ ಸಂಬಂಧ ಬೆಳೆಯುವುದು ಕಷ್ಟಸಾಧ್ಯ. ನಿಜ, ಒಂದು ಪರಿಹಾರವೇನೆಂದರೆ ದೀಕ್ಷೆ ಪಡೆದ ದಲಿತರಲ್ಲೇ ವಿವಾಹ ಸಂಬಂಧ ಕುದುರಿಸಬಹುದು. ಸಾಮಾಜಿಕ, ಆಧ್ಯಾತ್ಮಿಕ, ಧಾರ್ಮಿಕ ಸ್ಥಾನಮಾನ, ಶರಣರ ಒಕ್ಕೂಟ ಇಷ್ಟಲಿಂಗ ದೀಕ್ಷೆಯಿಂದ ಸಾಧ್ಯವಾಗುವುದು. ಜಗನ್ಮಾತಾ ಅಕ್ಕಮಹಾದೇವಿ ಹೀಗೆ ಹೇಳುತ್ತಾರೆ:

ಗುರುವಿನ ಕರುಣದಿಂದ ಲಿಂಗವ ಕಂಡೆ, ಜಂಗಮವ ಕಂಡೆ
ಗುರುವಿನ ಕರುಣದಿಂದ ಪಾದೋದಕ ಪ್ರಸಾದವ ಕಂಡೆ
ಗುರುವಿನ ಕರುಣದಿಂದ ಸಜ್ಜನ ಸದ್ಭಕ್ತರ ಸದ್ಗೋಷ್ಠಿಯ ಕಂಡೆ

ದೀಕ್ಷೆಯಿಂದ ಗುರುವಿನ ಕೃಪೆ ದೊರಕುತ್ತದೆ, ಪೂಜೆ -ಧ್ಯಾನಕ್ಕೆ ಇಷ್ಟಲಿಂಗವು ಪ್ರಾಪ್ತಿ ಯಾಗುತ್ತದೆ. ದಿನನಿತ್ಯ ತೀರ್ಥ ಪ್ರಸಾದ ಲಭ್ಯವಾಗುತ್ತವೆ. ಶರಣರ ಒಡನಾಟ ಗಣಪದವಿ ಪ್ರಾಪ್ತಿಯಾಗುತ್ತದೆ; ಜೀವನವು ಧನ್ಯವಾಗುತ್ತದೆ.

ನಾವಂತೂ ಯಾವುದೇ ಭೇದವಿಲ್ಲದೆ, ಬಯಸಿ ಬಂದ ಎಲ್ಲರಿಗೂ ದೀಕ್ಷೆಯನ್ನು, ಸಮಾನ ಹಕ್ಕುಗಳನ್ನು ಕೊಡಲು ಸಿದ್ಧರಿದ್ದೇವೆ. ಮತ್ತು ಮೇಲಾಗಿ ಶರಣರ ಹೋರಾಟ ಕಲ್ಯಾಣ ಕ್ರಾಂತಿ-ದಲಿತರ ಉದ್ಧಾರಕ್ಕಾಗಿಯೇ! ಲಿಂಗಾಯತ ಧರ್ಮದಷ್ಟು ಕಳಕಳಿಯಿಂದ ದಲಿತರ ಉದ್ಧಾರಕ್ಕೆ ಯಾವ ಧರ್ಮವೂ ಹೋರಾಡಿಲ್ಲ. ಈ ದೃಷ್ಟಿಯಿಂದ ದಲಿತರು ಬಸವ ಧರ್ಮವನ್ನು ಸ್ವೀಕರಿಸಿ ಅಸ್ಪೃಶ್ಯತೆಯ ತಿರುಗಣೆ ಮಡುವಿನಿಂದ ಹೊರಬರುವುದು ಶ್ರೇಯಸ್ಕರ.

ಅಸ್ಪೃಶ್ಯತೆಯ ಬಂಧನ ಕಳಚಲು ಯಾವುದೇ ಭಾರತೀಯ ಧರ್ಮವನ್ನು ದಲಿತರು ಸ್ವೀಕರಿಸಿದರೂ ಪರವಾಗಿಲ್ಲ. ಏಕೆಂದರೆ ಭಾರತವನ್ನು ಧರ್ಮಭೂಮಿಯನ್ನಾಗಿ ಹೊಂದಿರುವ ಭಾರತೀಯ ಧರ್ಮಗಳು ಎಂದೂ ದೇಶವಿರೋಧಿ ಚಟುವಟಿಕೆಗಳನ್ನು ನಡೆಸಲು ಹೋಗುವುದಿಲ್ಲ.

ದೀಕ್ಷೆ ಪಡೆಯಲು ಇರುವ ಇನ್ನೊಂದು ಆತಂಕ, ಮಾಂಸಾಹಾರ ಸೇವನೆ ಬಿಡಬೇಕೆಂಬುದು. ಲಿಂಗಾಯತ ಮತ್ತು ಜೈನ ಧರ್ಮಗಳು ಶುದ್ಧಸಸ್ಯಾಹಾರಿ ಧರ್ಮಗಳು. ಬೌದ್ಧ ಧರ್ಮ ಮೂಲತಃ ಸಸ್ಯಾಹಾರಿ ಧರ್ಮವಾಗಿದ್ದರೂ ಈಗ ನವ ದೀಕ್ಷಿತರಿಂದಾಗಿ ಮಾಂಸಾಹಾರದ ರೂಢಿ ಬೆಳೆಸಿಕೊಂಡಿದೆ. ಕೆಲವು ಪ್ರಗತಿಪರ ಚಿಂತಕರೆಂದು ಬೀಗುವವರು ಪೇಜಾವರ ಶ್ರೀಗಳಿಗೆ ನೀವು ಪ್ರಗತಿಪರರಾದರೆ ದಲಿತರೊಡನೆ ಸಹಪಂಕ್ತಿ ಭೋಜನ, ಅದೂ ಮಾಂಸಾಹಾರ ಮಾಡಿರಿ ಎಂದು ಪಂಥಾಹ್ವಾನ ನೀಡಿದ್ದಾರೆ. ಇದು ತಪ್ಪು, ಮತಾಂತರ, ಧರ್ಮಾಂತರ ವ್ಯಕ್ತಿಯ ಆಚಾರ - ವಿಚಾರಗಳನ್ನು ಉದಾತ್ತೀಕರಿಸಿ ವ್ಯಕ್ತಿತ್ವವನ್ನು ಉನ್ನತೀಕರಿಸಬೇಕು. ಪೂರ್ವಾಶ್ರಮದ ಜಾತಿಪ್ರಜ್ಞೆ, ಕೀಳರಿಮೆ ಎಲ್ಲ ತೊರೆದು ಪರಿಪಕ್ವವಾಗಬೇಕು. "ದಯವೇ ಧರ್ಮದ ಮೂಲ; ದಯವಿಲ್ಲದ ಧರ್ಮವದೇವುದಯ್ಯಾ? ದಯವಿರಬೇಕು ಸಕಲ ಪ್ರಾಣಿಗಳಲ್ಲಿ." ಎಂದ ಗುರು ಬಸವಣ್ಣನವರ ಮೂಲ ಸಿದ್ಧಾಂತವನ್ನು ವಿಕೃತಗೊಳಿಸುವುದು ಖಂಡಿತಾ ಸೂಕ್ತವಲ್ಲ.

1969ರಲ್ಲಿ ಒಂದು ಬೃಹತ್ ಹಿಂದು ಸಮಾವೇಶವು ಉಡುಪಿಯಲ್ಲಿ ನಡೆಯಿತು. ಆಗ ನಾನು ನನ್ನ ಭಾಷಣದಲ್ಲಿ, "ಹಿಂದುಗಳಿಗೆ ತಮ್ಮ ಧರ್ಮದಲ್ಲಿ ಅಭಿಮಾನ ಉಳಿಯ ಬೇಕಾದರೆ ಪ್ರತಿಯೊಬ್ಬ ಹಿಂದುವಿಗೂ ಒಂದು ಮಂತ್ರೋಪದೇಶವಾಗಬೇಕು. ಅದು ಶೈವವಾಗಿರಲಿ, ವೈಷ್ಣವವಾಗಿರಲಿ ಅಂಥದೊಂದು ದೀಕ್ಷೆ ಕೊಡಲ್ಪಡಬೇಕು." ಎಂದಾಗ ಬಹಳ ಜನ ಈ ವಿಚಾರವನ್ನು ಮೆಚ್ಚಿಕೊಂಡರು. ಪೂಜ್ಯ ಪೇಜಾವರ ಶ್ರೀಗಳು ಈಗ ದಲಿತರಿಗೆ ವೈಷ್ಣವ ದೀಕ್ಷೆ ಕೊಡಲು ಮುಂದಾಗಿದ್ದಾರಾದರೂ ಈ ನಿರ್ಧಾರ ಬಹಳ ತಡವಾದುದಾಗಿದೆ. ಏಕೆಂದರೆ ದಲಿತರಲ್ಲಿ ಪ್ರಜ್ಞಾವಂತರ ಸಂಖ್ಯೆ ಹೆಚ್ಚಾಗಿದೆ. ಈಗ ಅವರು ಪಡೆದುಕೊಳ್ಳುವ ದೀಕ್ಷೆ ಕೊಡ ಬಹುದಾದ ಸವಲತ್ತು, ಸಾಮಾಜಿಕ ಧಾರ್ಮಿಕ ಸ್ಥಾನಮಾನ, ಹಕ್ಕುಗಳು ಯಾವುವು ಎಂದು ಕೇಳುವಷ್ಟು ಬುದ್ಧಿವಂತರಾಗಿದ್ದಾರೆ.

ಬದಲಾದ ಪರಿಸರದಲ್ಲಿ ಇಂದು ದಲಿತರಿಗೆ ಬೇಕಾಗಿರುವುದು ವೈಷ್ಣವ ಅಥವಾ ಶೈವ ದೀಕ್ಷೆಯಲ್ಲ; ಭಾರತದೇಶದಲ್ಲಿ ಇರುವ ಹಲವಾರು ಆಧ್ಯಾತ್ಮಿಕ ಪಂಥಗಳವರು ಆಧ್ಯಾತ್ಮಿಕ ದೀಕ್ಷೆ ಕೊಡುತ್ತಲಿದ್ದಾರೆ. ಇಂದು ದಲಿತರಿಗೆ ಅಗತ್ಯವಾಗಿರುವುದು ಸ್ವಾಭಿಮಾನದ ಬದುಕು; ಗ್ರಾಮಾಂತರ ಪ್ರದೇಶಗಳಲ್ಲಿ ಕನಿಷ್ಠ ಸೌಲಭ್ಯಗಳು, ಮಾನವೀಯ ಸಂಬಂಧ. ಇವನ್ನು ಕಲ್ಪಿಸುವ ಮೇಲ್ಜಾತಿಯವರು ಸವರ್ಣೀಯರು ಮೊದಲು ಬದಲಾಗಬೇಕಾಗಿದೆ. ಜಾತೀಯತೆ ಮಹಾ ಪಾಪ! ಅಸ್ಪೃಶ್ಯತೆ ಆಚರಣೆ ದೇವರ ಸೃಷ್ಟಿಗೆ ಮಾಡುವ ಅಪಚಾರ ಎಂಬ ಅರಿವು ಅವರಲ್ಲಿ ಮೂಡಬೇಕಾಗಿದೆ. ಮಠಾಧೀಶರು ನಮ್ಮ ದೇಶದ ಹಿತದೃಷ್ಟಿಯಿಂದ ಅಸ್ಪೃಶ್ಯತೆಯ ಆಚರಣೆ ಒಂದು ಪಾಪ ಎಂಬುದನ್ನು ಜನರಲ್ಲಿ ಬಿಂಬಿಸಬೇಕು. ನಮ್ಮವನೇ ಆದ ದಾಸಪ್ಪನನ್ನು ತಿರಸ್ಕರಿಸಿ ಆತ ಜೋಸೆಫ್ ಆಗಿ ಬಂದಾಗ ಕೈಕುಲುಕುವ, ನಮ್ಮವಳೇ ಆದ ಮರಿಯಮ್ಮನನ್ನು ಹೊರಗೆ ಕುಳ್ಳಿರಿಸಿ ಆಕೆ ಮೇರಿಯಮ್ಮ ಆಗಿ ಬಂದಾಗ ಸೋಫಾದ ಮೇಲೆ ಕೂರಿಸಿ ಕಾಫಿ ಕೊಡುವ ಮನೋಭಾವದಲ್ಲಿ ಬದಲಾವಣೆ ತಂದುಕೊಳ್ಳಬೇಕು. ನಗರಪ್ರದೇಶಗಳಲ್ಲಿ ಯಾರು ಯಾರು ಎಂಬುದು ತಿಳಿಯದು. ಗ್ರಾಮೀಣ ಪ್ರದೇಶದಲ್ಲಿ ಅಸ್ಪೃಶ್ಯತೆ ಆಚರಣೆ ವಿಪರೀತವಾಗಿದೆ. ಇದರ ನಿವಾರಣೆಗಾಗಿ ಎಲ್ಲರೂ ಸನ್ನದ್ಧರಾಗಬೇಕಾಗಿದೆ.

★★★



ಕಾಯಕವೇ ಕೈಲಾಸವೆಂಬ ಮಹಾಮಂತ್ರವನ್ನು ಸಾರಿದ ಬಸವ ಕಲ್ಯಾಣ ಸುಕ್ಷೇತ್ರದಲ್ಲಿ ಒಂಬತ್ತನೆಯ

ಕಲ್ಯಾಣ ಪರ್ವ

2010ರ ಅಕ್ಟೋಬರ್ 20, 21 ಮತ್ತು 22 ರಂದು

ಶರಣ ಬಂಧುಗಳಿಗೆ ಶರಣು ಶರಣಾರ್ಥಿ.

ಮಹಾಮಾನವತಾವಾದಿ, ಲಿಂಗಾಯತ ಧರ್ಮ ಸಂಸ್ಥಾಪಕ, ಶರಣ ಗಣಮಣಿ ಧರ್ಮಗುರು ಬಸವಣ್ಣನವರ ಕಾರಣಿಕತ್ವ ಮತ್ತು ಸಂದೇಶಗಳಲ್ಲಿ ನಂಬಿಕೆ ಇಟ್ಟು ನಡೆಯುವ ಬಸವ ಭಕ್ತರು, ಬಸವ ಧರ್ಮೀಯರಾದ ಲಿಂಗಾಯತರು ಮತ್ತು ಬಸವಾಯತರೆಲ್ಲರೂ ವರ್ಷಕ್ಕೆ ಒಮ್ಮೆಯಾದರೂ ಒಂದು ಸ್ಥಳದಲ್ಲಿ ಸಮಾವೇಶವಾಗುವುದು ಅತ್ಯಂತ ಅವಶ್ಯಕ. ಇದು ಸಮಾನತೆ ಮತ್ತು ಸಹೋದರತ್ವ ಬೆಳೆಸಲು ಸಹಕಾರಿಯಾಗುವುದು ಎಂಬ ಉದ್ದೇಶದಿಂದ ಆದಿ ಶರಣರ ಸಂಕಲ್ಪದಂತೆ ವಿಶ್ವಗುರು ಬಸವಣ್ಣನವರ ವಿದ್ಯಾಭೂಮಿ, ತಪೋಸ್ಥಾನ, ಐಕ್ಯಕ್ಷೇತ್ರ ಕೂಡಲಸಂಗಮದಲ್ಲಿ ಶರಣ ಮೇಳ ಎಂಬ ಬೃಹತ್ ಧಾರ್ಮಿಕ ಸಮಾವೇಶವನ್ನು 1988ರಿಂದ ಪ್ರತಿವರ್ಷವೂ ಜನವರಿ 11 ರಿಂದ 15ರವರೆಗೆ ನಡೆಸಿಕೊಂಡು ಬರಲಾಗುತ್ತಿದ್ದು 23ನೆಯ ಶರಣ ಮೇಳವು ಇದೇ 2010ರ ಜನವರಿಯಲ್ಲಿ ಯಶಸ್ವಿಯಾಗಿ ಜರುಗಿದೆ. ಬೀದರ ಜಿಲ್ಲೆಯಲ್ಲಿರುವ ಬಸವ ಕಲ್ಯಾಣವು 12ನೆಯ ಶತಮಾನದಲ್ಲಿ ವಿಶ್ವಗುರು ಬಸವಣ್ಣನವರ ಕಾರ್ಯಕ್ಷೇತ್ರವಾಗಿತ್ತು. ಲಿಂಗದೇವನ ಅನುಗ್ರಹವಾಗಿ ಇಷ್ಟಲಿಂಗದ ಪರಿಕಲ್ಪನೆ ಮೂಡಿ ಧರ್ಮಪಿತರು ಲಿಂಗಾಯತ ಧರ್ಮದ ರೂಪು ರೇಷೆ ಹಾಕಿದುದು ಕೂಡಲ ಸಂಗಮದಲ್ಲಿ. ಆ ನೀಲನಕ್ಷೆಯು ಕಾರ್ಯರೂಪಕ್ಕೆ ಬಂದುದು ಬಸವ ಕಲ್ಯಾಣದಲ್ಲಿ.

"ಕಪಿಲಸಿದ್ಧಮಲ್ಲಿಕಾರ್ಜುನಾ, ನಿಮ್ಮ ಸಂಗನ ಬಸವಣ್ಣ
ಬಂದು ಕಲ್ಯಾಣದಲ್ಲಿ ಮಹಾಮನೆಯ ಕಟ್ಟಿದಡೆ
ಮರ್ತ್ಯಲೋಕವೆಲ್ಲವೂ ಭಕ್ತಿಸಾಮ್ರಾಜ್ಯವಾಯಿತು"

ಎಂದು ಬಸವಯೋಗಿ ಸಿದ್ಧರಾಮೇಶ್ವರರು ಹೇಳುವಂತೆ, "ಅಯ್ಯಾ, ಭಕ್ತಿಗೆ ಬೀಡಾದುದು ಕಲ್ಯಾಣ 36 ವರ್ಷ, ಅನುಭವಕ್ಕೆ ಶಿವಸದನವಾದುದು 27 ವರ್ಷ" ಎಂದು ಧರ್ಮಪಿತರು ಸಾರುವಂತೆ ಬಸವ ಕಲ್ಯಾಣವು ವಿಕ್ರಮನಾಮ ಸಂವತ್ಸರ (ಕ್ರಿ.ಶ.1160) ದಿಂದ ರಾಕ್ಷಸನಾಮ ಸಂವತ್ಸರ (ಕ್ರಿ.ಶ.1196)ದ ವರೆಗೆ ಶ್ರೀ ಗುರು ಬಸವಣ್ಣನವರ ಪರುಷ ಪಾದದಿಂದ ಭಕ್ತಿಯ ಬೀಡಾಗಿತ್ತು. ಈ ಪವಿತ್ರ ಶರಣ ಭೂಮಿಯು ಇಂದು ನಮಗೆಲ್ಲ ಧರ್ಮಭೂಮಿ (Holy land). ಇಂಥ ಸುಕ್ಷೇತ್ರದಲ್ಲಿ ವರ್ಷಕ್ಕೊಮ್ಮೆಯಾದರೂ ಬಸವ ಭಕ್ತರು ಸಮಾವೇಶವಾಗಬೇಕೆಂದು 2002ನೆಯ ಇಸವಿಯ ಮೇ 1, 2 ಮತ್ತು 3ರಂದು ಮೊಟ್ಟ ಮೊದಲನೆಯ ಕಲ್ಯಾಣಪರ್ವ ಸಮಾಗಮವನ್ನು ಸಂಯೋಜಿಸಲಾಗಿತ್ತು. ಜನವರಿ 14 ಇಷ್ಟಲಿಂಗದ ಪರಿಕಲ್ಪನೆ ರೂಪು ತಳೆದು ಲಿಂಗಾಯತ ಧರ್ಮವು ಸಂಸ್ಥಾಪನೆಗೊಂಡ ದಿನವಾದರೆ ಮೇ 1 ಕಾಯಕದ ದಿನ; ಕಾಯಕ ಜೀವಿಗಳಿಗೆ ಗೌರವ ಸೂಚಿಸುವ ದಿನ. "ಕಾಯಕವೇ ಕೈಲಾಸ " ಎಂಬ ದುಡಿಮೆಯ ಸೂತ್ರವನ್ನು ಸಾರಿ ದುಡಿಮೆಗೆ ದಿವ್ಯತ್ವ ನೀಡಿ, ಸಮಾಜವಾದದ ಆಧಾರ ಸ್ತಂಭವಾದ ಕಾಯಕಕ್ಕೆ ಪಟ್ಟ ಕಟ್ಟಿದ ಕ್ರಾಂತಿಪುರುಷ ಬಸವಣ್ಣನವರು ಕಾಯಕ-ದಾಸೋಹ-ಪ್ರಸಾದ ಎಂಬ ತ್ರಿತತ್ತ್ವವನ್ನು ಸಾರಿ ಜಾತಿವರ್ಣವರ್ಗರಹಿತ ಧರ್ಮ ಸಹಿತ ಕಲ್ಯಾಣ ರಾಜ್ಯವನ್ನು ಕಟ್ಟಿದುದು ಬಸವ ಕಲ್ಯಾಣದ ಪುಣ್ಯಭೂಮಿಯಲ್ಲೇ. ಕಾಯಕ ದಿನ ಮೇ ಒಂದನ್ನು ಮುಖ್ಯವಾಗಿರಿಸಿಕೊಂಡು ಪ್ರತಿ ವರ್ಷ "ಕಲ್ಯಾಣ ಪರ್ವ"ವನ್ನು ನಡೆಸಲಾಗುತ್ತಿತ್ತು. ಆರನೆಯ ಕಲ್ಯಾಣ ಪರ್ವವನ್ನು 2007ನೆಯ ಇಸವಿಯ ಮೇ1,2 ಮತ್ತು 3ರಂದು ನಡೆಸಲಾಯಿತು. ಗಾಳಿ ಮತ್ತು ಮಳೆಯ ಕಾರಣ ಸಮಯವನ್ನು ಬದಲಾಯಿಸಿ 9ನೆಯ ಕಲ್ಯಾಣ ಪರ್ವವನ್ನು 2010 ರ ಅಕ್ಟೋಬರ್ 20, 21 ಮತ್ತು 22 ರಂದು ಏರ್ಪಡಿಸಲಾಗುತ್ತಿದೆ.

ಕಲ್ಯಾಣ (ಗಣ) ಪರ್ವಕ್ಕೆ ಧನ ಸಹಾಯ

ಕಲ್ಯಾಣ ಎಂಬುದು ಒಂದು ಸ್ಥಳದ ಹೆಸರು ಮತ್ತು ವಿಶ್ವಗುರು ಬಸವಣ್ಣನವರ ಧ್ಯೇಯವೇ ಎಲ್ಲ ಮಾನವರ ಲೇಸು -ಕಲ್ಯಾಣ. ಆದರ್ಶ ಕಲ್ಯಾಣ ರಾಜ್ಯ (Welfare state) ನಿರ್ಮಾಣವೇ ಅವರ ಹೋರಾಟದ ಗುರಿಯಾಗಿತ್ತು. ಗಣ ಎಂದರೆ ಸಮೂಹ, ಪರ್ವ ಎಂದರೆ ಹಬ್ಬ, ಶರಣ ಗಣವು ಶರಣ ಭೂಮಿ ಬಸವ ಕಲ್ಯಾಣದಲ್ಲಿ ನೆರೆದು ಆದಿ ಶರಣರ ಜೀವನ-ಸಾಧನೆ-ಸಂದೇಶಗಳನ್ನು ಕೊಂಡಾಡುವ ಹಬ್ಬ ಈ ಕಲ್ಯಾಣ ಪರ್ವ. ಅಂದು ಧರ್ಮಪಿತ ಬಸವಣ್ಣನವರು ಗಣಪರ್ವಗಳನ್ನು ಕಲ್ಯಾಣದಲ್ಲಿ ನಡೆಸುತ್ತಿದ್ದು, ಭಕ್ತರು

ಅಂಗ, ವಂಗ, ಕಳಿಂಗ, ಗುರ್ಜರ, ಸಿಂಹಳ ಮುಂತಾದ ಭಾಗಗಳಿಂದೆಲ್ಲ ಸಮಾವೇಶವಾಗುತ್ತಿದ್ದುದಾಗಿ ಹರಿಹರ, ಸಿಂಗಿರಾಜ ಮುಂತಾದವರು ತಮ್ಮ ಕಾವ್ಯಗಳಲ್ಲಿ ಬಣ್ಣಿಸುತ್ತಾರೆ. "ಪಾಷಂಡಿ ಭೂಮಿಯೊಳು ಶಿವಭಕ್ತಿಯನಾರಂಭಿಸಿ ಸಾಮರ್ಥ್ಯಮಂ ಬಿತ್ತಿ ಪ್ರತ್ಯಕ್ಷಂಗಳಂ ಬೆಳೆದು, ಗಣಪರ್ವಂಗಳ ಸುಫಲಂ ಮಾಡಲೆಂದು ಬಂದ ಕಾರಣಿಕ ಬಸವ ನಿನ್ನ ದೆಸೆಯಿಂದ ಎಮ್ಮ ಭಕ್ತಿ ಬಣ್ಣವೇರಿತು" ಎಂದು ಹರಿಹರನು ಉದ್ಗರಿಸುತ್ತಾನೆ. ಅಂಥ ಗಣಪರ್ವವನ್ನು ಇಂದು ನೀವು-ನಾವು ಮಾಡಿ ತೋರಿಸಬೇಕಾಗಿದೆ. ಅಕ್ಟೋಬರ್ 19ರ ರಾತ್ರಿಯಿಂದ ಅಕ್ಟೋಬರ್ 23 ರ ಬೆಳಗಿನವರೆಗೆ ಕಲ್ಯಾಣ ಪರ್ವದಲ್ಲಿ ಸಮಾವೇಶವಾಗುವ ಶರಣ ಬಂಧುಗಳಿಗೆ ವಸತಿ ಮತ್ತು ಪ್ರಸಾದದ ವ್ಯವಸ್ಥೆ ಮಾಡಬೇಕಾಗುತ್ತದೆ. ಭವ್ಯವಾದ ಸಭಾ ಮಂಟಪ, ಶಾಮಿಯಾನಾ ಕೊಠಡಿಗಳು, ವಿಶಾಲವಾದ ಪ್ರಸಾದ (ಊಟ)ಮಂಟಪ ಮುಂತಾದವುಗಳ ವ್ಯವಸ್ಥೆ ಮಾಡಲು ಅಪಾರವಾದ ಹಣದ ಆವಶ್ಯಕತೆ ಇರುತ್ತದೆ. ದಾನಿಗಳು ಮುಂದೆ ಸೂಚಿಸಿದಂತೆ ಧನ ಸಹಾಯ ಮಾಡಬಹುದು.

1. ಮಹಾಪೋಷಕರು	: 5000 ರೂ. ಮತ್ತು ಮೇಲೆ ಕೊಟ್ಟವರು
2. ಪೋಷಕರು	: 2000 ರೂ. ಮತ್ತು ಮೇಲೆ ಕೊಟ್ಟವರು
3. ದಾನಿಗಳು	: 1000 ರೂ. ಮತ್ತು ಮೇಲೆ ಕೊಟ್ಟವರು
4. ಹಿತೈಷಿಗಳು	: 500 ರೂ 5. ಸ್ವಾಗತ ಸಮಿತಿ ಸದಸ್ಯತ್ವ : 300 ರೂ
6. ಪ್ರತಿನಿಧಿ ಶುಲ್ಕ	: 150 ರೂ.

ಒಂದೊಂದು ಹೊತ್ತಿನ ದಾಸೋಹ ವೆಚ್ಚ ಸಹ ಕೊಡಬಹುದು.

ಅನ್ನ ದಾಸೋಹಕ್ಕಾಗಿ ಭಕ್ತಿಪೂರ್ವಕ ಕಾಣಿಕೆಗಳನ್ನು ಶಕ್ತ್ಯಾನುಸಾರ ಕೊಡಬಹುದು.

ವಿ.ಸೂ. : ವಾರ್ಷಿಕ ಸಮಾವೇಶವಾದ ಕಲ್ಯಾಣಪರ್ವಕ್ಕೆ ತಮ್ಮ ಕೊಡುಗೆ ನಿರಂತರವಾಗಿ ಇರಲಿ ಎಂಬ ಇಷ್ಟವಿದ್ದವರು 5000/10000 ರೂಪಾಯಿಗಳ ಪುದುವಟ್ಟು (F.D) ಇಡಲು ದೇಣಿಗೆ ನೀಡಿದರೆ, ಈ ಪುದುವಟ್ಟಿನ ಬಡ್ಡಿಯ ಹಣವನ್ನು ಕಲ್ಯಾಣಪರ್ವದ ದಾಸೋಹಕ್ಕೆ ವಿನಿಯೋಗಿಸಲಾಗುವುದು. ರಸೀತಿ ಪುಸ್ತಕ, ಕರಪತ್ರಗಳನ್ನು ಪಡೆದು ದೇಣಿಗೆ ಸಂಗ್ರಹಿಸುವವರಿಗೂ ಅವಕಾಶವಿದೆ.

ಶರಣ ಭೂಮಿ ಬಸವ ಕಲ್ಯಾಣದಲ್ಲಿ ವಿವಿಧ ಯೋಜನೆಗಳು

ಬಸವ ಧರ್ಮ ಪೀಠ (ರಿ.) ಟ್ರಸ್ಟ್ ವತಿಯಿಂದ ಬಸವ ಕಲ್ಯಾಣದಲ್ಲಿ ಶರಣ ಸಂಸ್ಕೃತಿಯ ಪುನರುತ್ಥಾನ ಮಾಡಬೇಕೆಂದು ಸಂಕಲ್ಪಿಸಿ ದಿ.21-12-2001 ರಂದು ರಾಷ್ಟ್ರೀಯ ಹೆದ್ದಾರಿ 9 ರಿಂದ ಬಸವ ಕಲ್ಯಾಣಕ್ಕೆ ಹೋಗುವ ಮುಖ್ಯರಸ್ತೆಯ ಬದಿಗೆ 3 ಎಕರೆ ಜಮೀನನ್ನು ಖರೀದಿಸಲಾಯಿತು. ಪುನಃ ಹದಿನೇಳೂವರೆ ಎಕರೆ ಖರೀದಿಸಿ ಬಸವ ಮಹಾಮನೆ ಎಂಬ ಹೆಸರಿನಲ್ಲಿ ಮಠವನ್ನು ಸ್ಥಾಪಿಸಿರುವುದೇ ಅಲ್ಲದೆ ನಿತ್ಯ ದಾಸೋಹ, ಹುಣ್ಣಿಮೆ ಕಾರ್ಯಕ್ರಮ ನಡೆಸಿಕೊಂಡು ಬರಲಾಗುತ್ತಿದೆ. 1 2ನೆಯ ಶತಮಾನದ ಧಾರ್ಮಿಕ ವೈಭವ 21ನೆಯ ಈ ಶತಮಾನದಲ್ಲಿ ನಡೆಯುವಂತೆ ಕಾರ್ಯೋನ್ಮುಖವಾಗಬೇಕಾಗಿದೆ. ಅದು ಶರಣರ ಸಂಕಲ್ಪ ಕೂಡ. ಹೇಗೆಂದರೆ ಬಸವಣ್ಣನವರು ಕಲ್ಯಾಣವನ್ನು ಗಡಿಪಾರಾಗಿ ಬಿಟ್ಟು ಹೋದ 770 ವರ್ಷಗಳ ನಂತರ ನಾವು ಬರುತ್ತೇವೆ ಎಂದು ಭವಿಷ್ಯವಾಣಿ ನುಡಿದಿದ್ದಾರೆ. ಶರಣರು ಮುಕ್ತಾತ್ಮರಾದ ಕಾರಣ ಅವರು ಶರೀರಧಾರಿಗಳಾಗಿ ಬರುವುದಿಲ್ಲ; ಅವರ ಸಂದೇಶಗಳು ಪುನಃ ಪ್ರಚಾರಗೊಳ್ಳುತ್ತವೆ. ಅವರ ಸಂಕಲ್ಪಗಳು ಕಲ್ಯಾಣ ಕ್ರಾಂತಿಯಿಂದಾಗಿ ಅಪೂರ್ಣವಾಗಿ ಉಳಿದಿದ್ದವು, ಈಗ ಪೂರ್ಣಗೊಳ್ಳುವ ಕಾಲ ಬರುತ್ತದೆ ಎಂಬುದೇ ಅವರ ಸಂಕಲ್ಪದ ಮರ್ಮ. ಜಗ ಬದುಕಲಿ, ಜನ ಬದುಕಲಿ ಎಂದು ಆದಿ ಶರಣರು ವಚನಗಳನ್ನು ರಚಿಸಿದುದು ಮಾತ್ರವಲ್ಲ ವಚನ ಸಾಹಿತ್ಯವನ್ನು ನಾಶ ಮಾಡಬೇಕೆಂದು ಜಾತಿವಾದಿಗಳು ಪಣ ತೊಟ್ಟಾಗ, ತಮ್ಮ ಪ್ರಾಣವನ್ನು ಪಣಕ್ಕಿಟ್ಟು, ಹೋರಾಡಿ ವಚನ ವಾಙ್ಮಯವನ್ನು ರಕ್ಷಿಸಿದರು. ಆದಿ ಶರಣರ ಆ ಬಲಿದಾನದ ಋಣವನ್ನು ತೀರಿಸಬೇಕಾದ್ದು ಪ್ರತಿಯೊಬ್ಬ ಅನುಯಾಯಿಯ ಅಭಿಮಾನದ ಕರ್ತವ್ಯವಾಗಿದೆ. ಈ ಹಿನ್ನೆಲೆಯಲ್ಲಿ ಬಸವ ಧರ್ಮ ಪೀಠ ಟ್ರಸ್ಟಿನ ಬಸವ ಕಲ್ಯಾಣ ಶಾಖೆಯಲ್ಲಿ ಹಲವಾರು ಯೋಜನೆಗಳನ್ನು ರೂಪಿಸಲಾಗಿದೆ. ಕಾಣಿಕೆ ನೀಡುವವರಿಗೆ ಅವಕಾಶವಿದೆ.

ಕಲ್ಯಾಣ ಪರ್ವ ಉತ್ಸವ ಸಮಿತಿ, ಬಸವ ಧರ್ಮ ಪೀಠ, ಬಸವ ಮಹಾಮನೆ, ಬಸವ ಕಲ್ಯಾಣ
-585327, ಜಿಲ್ಲೆ-ಬೀದರ್
☎ :08481 -251921/252856
9663385657, 9480497346

ಭಾಗ-28

- ಮಾತಾಜಿ

ಬಸವ ವಚನಾಮೃತ

494. ಪೂಜೆಯೆ ಸರ್ವಸ್ವ

ವರಂ ಪ್ರಾಣತ್ಯಾಗಶ್ಚೇದನಂ ಶಿರಸೋಽಪಿ ವಾ।
ನತ್ವನಭ್ಯರ್ಚ್ಯ ಭುಂಜೀಯಾತ್ ಭಗವಂತಂ ತ್ರಿಲೋಚನಂ॥
ಎಂದುದಾಗಿ, ದೇಹ ಧರ್ಮ ತನ್ನಲ್ಲಿ ಆದಂತೆ ಆಗಲಿ,
ಲಿಂಗದೇವನ ಪೂಜಿಸಿದಲ್ಲದೆ ನಿಲಲಾರೆನು.

- ಬ.ವ.ದೀ.492

ಬಹುಶಃ ಯಾವಾಗಲಾದರೂ ಗುರು ಬಸವಣ್ಣನವರಿಗೆ ಆರೋಗ್ಯ ಕೆಟ್ಟಿರಬಹುದು. ಅಶಕ್ತೆ ಬಂದು ಸ್ನಾನ ಪೂಜೆ ಮಾಡಲು ಆಗದಷ್ಟು ದೇಹ ದುರ್ಬಲವಾಗಿರಬಹುದು. ಆಗ ಜೊತೆಗಿರುವವರು ಇವತ್ತು ಒಂದು ದಿನ ಸ್ನಾನ - ಪೂಜೆ ಇಲ್ಲದಿದ್ದರೆ ಏನಂತೆ ಆಹಾರವನ್ನು ತೆಗೆದುಕೊಂಡು ಸ್ವಲ್ಪ ಶಕ್ತಿ ಪಡೆಯಿರಿ ಎಂದು ಹೇಳಿರಬಹುದು. ಅದಕ್ಕೆ ಉತ್ತರವಾಗಿ ಈ ವಚನವನ್ನು ಹೇಳಿದಂತೆ ತೋರುತ್ತದೆ. "ದೇಹ ಧರ್ಮವು ತನ್ನಲ್ಲಿ ಆದಂತೆ ಆಗಲಿ; ನಾನಂತೂ (ಮಿಂದು ಮಡಿಯುಟ್ಟು) ಪೂಜಿಸಿದಲ್ಲದೆ ಇರಲಾರೆನು." ಎಂದು. ಇಂದಿಗೂ ಸಹ ಎಂಥಾ ಪ್ರಸಂಗದಲ್ಲಿಯೂ ಸ್ನಾನ-ಪೂಜೆ ಇಲ್ಲದೆ ಬಾಯಿಗೆ ನೀರೂ ಹಾಕದ ನಿಯಮವನ್ನು ಸ್ವಾಮಿ, ಸನ್ಯಾಸಿಗಳು ಮಾತ್ರವಲ್ಲದೆ ಆಚಾರಸಂಪನ್ನರಾದ ಗೃಹಸ್ಥರು ಸಹಿತ ಪಾಲಿಸುವುದನ್ನು ನೋಡಬಹುದು. ಈ ನಿಯಮವು ಮನೋದಾರ್ಢ್ಯವನ್ನು ಬೆಳೆಸುತ್ತದೆ.

495. ಸರ್ವಸ್ವವೂ ದೇವರೆ

ಸುರರು ಕಿನ್ನರರು ಕಿಂಪುರುಷರೆಂಬುವರನಾರು ಬಲ್ಲರು?
ಎನ್ನ ಚಿತ್ತವು ನಿಮ್ಮ ಮೇಲೆ, ಸಂಗಯ್ಯಾ;
ಎನ್ನ ಚಿತ್ತವು ನಿಮ್ಮಲ್ಲಿಯೇ ಲಿಂಗಯ್ಯಾ.
ಲಿಂಗದೇವಾ, ಅನ್ಯವೆಂಬುದನರಿಯೆನಯ್ಯಾ. - ಬ.ವ.ದೀ.493

ಹಿಂದುಪುರಾಣಗಳಲ್ಲಿ ಇವೆಲ್ಲ ಪದಗಳು, ಪಾತ್ರಗಳು ಬರುತ್ತವೆ. ಸುರರು ಎಂದರೆ ದೇವತೆಗಳು, ಅವರು ಅಮೃತಪಾನ ಮಾಡಿದವರು, ಸಾವಿಲ್ಲದ ಅಮರರು ಎಂಬ ಕಲ್ಪನೆಯುಂಟು. ಕಿನ್ನರರು ಎಂದರೆ ಮಧುರ ಕಂಠವನ್ನು ಹೊಂದಿದ ದೇವಲೋಕದ ಗಾಯಕರು. ಕಿಂಪುರುಷರು ಎಂದರೆ ಕುದುರೆಯ ತಲೆ ಮನುಷ್ಯನ ಶರೀರ ಇರುವ ಒಂದು ದೇವತೆ.

"ವಿವಿಧ ಬಗೆಯ ಪುಣ್ಯಕಾರ್ಯಗಳನ್ನು ಮಾಡಿದರೆ ಸತ್ತ ನಂತರ ಸ್ವರ್ಗಲೋಕವನ್ನು ಸೇರಿ ಅಲ್ಲಿ ದೇವತೆಗಳಾಗಿ, ಕಿನ್ನರರಾಗಿ, ಕಿಂಪುರುಷರಾಗಿ ಇರಬಹುದು ಎಂದೆಲ್ಲ ಹೇಳಲಾಗುತ್ತದೆ. ಇದು ಯಾರಿಗೆ ಗೊತ್ತು? ನನ್ನ ಮನಸ್ಸು ಮಾತ್ರ ಸಂಗಯ್ಯಾ ನಿನ್ನ ಮೇಲೆ; ನನ್ನ ಚಿತ್ತವು ಮಾತ್ರ ಲಿಂಗಯ್ಯ ನಿನ್ನ ಮೇಲೆ. ಲಿಂಗದೇವಾ, ನಿನ್ನ ಮೇಲೆ ನನ್ನ ಪ್ರೇಮ ಅಚಲವಾಗಿದೆ; ನಾನು ಬೇರೆ ಇನ್ನೇನನ್ನೂ ಅರಿಯೆನು." ಎನುತ್ತಾರೆ ಗುರುಬಸವಣ್ಣನವರು.

496. ಅನನ್ಯ ಶರಣಾಗತಿ

ಮಂಡೆಯ ಬೋಳಿಸಿಕೊಂಡು ಗಂಡುದೊತ್ತುವೊಕ್ಕೆನಯ್ಯಾ
ಲಜ್ಜೆಗೆಟ್ಟಾದಡೂ ಲಿಂಗವನೊಲಿಸುವೆ
ನಾಣುಗೆಟ್ಟಾದಡೂ ಲಿಂಗವನೊಲಿಸುವೆ
ಕೆಲದ ಸಂಸಾರಿಗಳು ನಗುತಿರ್ದಡಿರಲಿ;

ಲಿಂಗದೇವಾ, ಶರಣುಗತಿವೊಕ್ಕೆನಯ್ಯಾ. - ಬ.ವ.ದೀ.494

ಹಿಂದಿನ ಕಾಲದಲ್ಲಿ ಜೀತಕ್ಕೆ ಒಪ್ಪಂದ ಮಾಡಿಕೊಂಡು ಬಂದ ಗಂಡದೊತ್ತುಗಳು ತಲೆಯನ್ನು ಬೋಳಿಸಿಕೊಳ್ಳುತ್ತಿದ್ದರು. ಸಾಧಕ ಜೀವಿ ಬಸವಣ್ಣನವರು ದೇವನಿಗೆ ತೊತ್ತಾಗುತ್ತಿರುವರು. ಸಾಧಕರು ಒಂದು ವಿಶಿಷ್ಟ ಮಾನಸಿಕ ಸ್ಥಿತಿ ಹೊಂದಿದ್ದಾಗ ತಾವು ಇನ್ನೊಬ್ಬರ ಕಣ್ಣಿಗೆ ಚೆಂದವಾಗಿ ಕಾಣಬಾರದೆಂದು ಹೇಗೋ ಇರುವರು. ಅದರಲ್ಲಿ ತಲೆ ಕೂದಲು ಬೋಳಿಸಿಕೊಳ್ಳುವುದೂ ಒಂದು. ಸ್ತ್ರೀ-ಪುರುಷರ ಸೌಂದರ್ಯಕ್ಕೆ ಬಹಳ ಮುಖ್ಯ ಸಾಧನ ಕೂದಲು. ರಸಿಕರು ಕೂದಲಿನ ಅಲಂಕಾರಕ್ಕೆ ಹೆಚ್ಚು ಮಹತ್ವಕೊಟ್ಟರೆ ವೈರಾಗ್ಯ ಮೂರ್ತಿಗಳು ಅದರ ಬಗ್ಗೆ ಉದಾಸೀನ ಮಾಡುವರು. ತರುಣ-ತರುಣಿಯರು ಕೂದಲು ತೀಡಿಕೊಳ್ಳುವುದರಲ್ಲೇ ಹೆಚ್ಚು ಸಮಯ ಕಳೆಯುವರು. ಆದರೆ ಗುರು ಬಸವಣ್ಣನವರು ಉಳಿದ ಸಮವಯಸ್ಕರಿಗಿಂತ ಬೇರೆಯೇ ಆಗಿ ಕೂದಲನ್ನು ಬೋಳಿಸಿಕೊಂಡು ಪೂಜಾನಿರತರಾಗುತ್ತಿದ್ದಾರೆ. ಅದರಿಂದ ಸಮವಯಸ್ಕರು ಇವರನ್ನು ಮೂದಲಿಸಿರಬಹುದು. ನಿನಗೆ ಈ ರೀತಿ ವೇಷದಲ್ಲಿರಲು ನಾಚಿಕೆಯಾಗದೆ? ಎಂದು. ಅವರಿಗೆ ಹೀಗೆ ಉತ್ತರಕೊಟ್ಟಿರಬಹುದು: "ನಾಚಿಕೆ ಬಿಟ್ಟಾದರೂ ಲಿಂಗವನ್ನೊಲಿಸುವೆ. ಇತರರಿಂದ ಅವಮಾನಿಸಲ್ಪಟ್ಟರೂ ಪರವಾಗಿಲ್ಲ ಲಿಂಗವನ್ನೊಲಿಸುವೆ. ಎಂದು. (ಅದೊಂದು ವಿಶಿಷ್ಟ ಮಾನಸಿಕ ಸ್ಥಿತಿ. 1965 ಫೆಬ್ರವರಿಯಲ್ಲಿ ಪೂಜ್ಯ ಗುರುಗಳ ದರ್ಶನವಾಯಿತು. ನಂತರ ಅಕ್ಕನ ಪ್ರವಚನ ಓದಿದೆ. ಅದು ಗಾಢವಾದ ಪರಿಣಾಮ ಬೀರಿತು. ಉಡುತ್ತಿದ್ದ ಬಣ್ಣಬಣ್ಣದ ಬಟ್ಟೆಗಳನ್ನು ಬಿಟ್ಟು ತೀರಾ ಕಡಿಮೆ ಬೆಲೆಯ ಬಿಳಿಯ ಸೀರೆ ಉಡಲಾರಂಭಿಸಿದೆ. ಅವರೆಗೂ ತೊಡುತ್ತಿದ್ದ ಬಂಗಾರದ ಆಭರಣ ಬಿಚ್ಚಿಟ್ಟೆ. ಕೊರಳಲ್ಲಿ ರುದ್ರಾಕ್ಷಿ ಹಾಕಿಕೊಂಡು, ಹಣೆಯ ಮೇಲೆ ವಿಭೂತಿಯನ್ನು ಧರಿಸಿಕೊಂಡೇ ಕಾಲೇಜಿಗೂ ಹೋಗತೊಡಗಿದೆ. ಆಗ ಸಹಪಾಠಿಗಳಿಗೆ ಆಶ್ಚರ್ಯ, ದಿಗ್ಭ್ರಾಂತಿ. ಮನೆಯಲ್ಲೋ ಅಜ್ಜಿ (ತಂದೆಯ ತಾಯಿ) ಮತ್ತು ಅಜ್ಜಂದಿರು (ತಾಯಿಯ ತಂದೆ ಹಾಗೂ ಚಿಕ್ಕಪ್ಪ) ಗಳ ಗಲಾಟೆ. ಈ ರೀತಿ ಭಿಕಾರಿಯಂತೆ ಇದ್ದರೆ ನಮಗೆ ಅವಮಾನ. ನಿನ್ನ ಮಗಳಿಗೆ ಬುದ್ಧಿ ಹೇಳು. ಎಂದು ತಾಯಿಯವರಿಗೆ ಬೈಯುತ್ತಿದ್ದರು. ಅವರು ನನ್ನ ಕೊರಳಲ್ಲಿದ್ದ ರುದ್ರಾಕ್ಷಿ ಮಾಲೆಯನ್ನು ಕತ್ತರಿಸಬೇಕೆಂದು ನಾನು ಮಲಗಿದ್ದಾಗ ಒಮ್ಮೆ ಪ್ರಯತ್ನಿಸಿದ್ದೂ ಉಂಟು. ಆಗ ನನಗೆ ತಟ್ಟನೆ ಎಚ್ಚರವಾಯಿತು. ಓರ್ವ ಮುತ್ತೈದೆ ತನ್ನ ಮಂಗಲ ಸೂತ್ರ ಹೇಗೆ ತೆಗೆಯುವುದಿಲ್ಲವೋ ಹಾಗೆ ನಾನು ಈ ಮಾಲೆ ತೆಗೆಯುವುದಿಲ್ಲ ಎಂದಿದ್ದೆ. ಈಗಿನ ಬಹುಪಾಲು ಹೆಣ್ಣುಮಕ್ಕಳಿಗೆ ಮಂಗಳ ಸೂತ್ರದ ಬಗ್ಗೆಯೂ ನಿಷ್ಠೆಯಿಲ್ಲ. ಈಗದು ಅಲಕಾರಿಕ ವಸ್ತುವಾಗಿ ಬಿಟ್ಟದೆ.) ಕೆಲದ ಸಂಸಾರಿಗಳು ನಗುತಿರ್ದಡಿರಲಿ ಎನ್ನುವ ವಾಕ್ಯ ನೋಡಿದಾಗ ಸಾಧಕ ಜೀವಿ ಬಸವಣ್ಣನವರ ಹಂಬಲ ಕಂಡು ಇತರ ಸಂಸಾರಿಗಳು ಅಪಹಾಸ್ಯ ಮಾಡಿ ನಕ್ಕಿರಬಹುದೆನಿಸುತ್ತದೆ. "ಯಾರಾದರೂ ನಗಲಿ, ನಾನು ಮಾತ್ರ ಲಿಂಗದೇವನಿಗೆ ಶರಣಾಗಿ ಅವನನ್ನು ಪೂಜಿಸುತ್ತೇನೆ." ಎನ್ನುತ್ತಾರೆ.

497. ಉದಯ ಅಸ್ತಮಾನ ಯಾವುವು?

ಎನಗೆ ನಿಮ್ಮ ನೆನಹಾದಾಗಲೆ ಉದಯ;
ಎನಗೆ ನಿಮ್ಮ ಮರಹಾದಾಗಲೆ ಅಸ್ತಮಾನ
ಎನಗೆ ನಿಮ್ಮ ನೆನಹವೆ ಜೀವನ
ಎನಗೆ ನಿಮ್ಮ ನೆನಹವೆ ಪ್ರಾಣ ಕಾಣಾ ತಂದೆ
ಸ್ವಾಮಿ, ಎನ್ನ ಹೃದಯದಲ್ಲಿ ನಿಮ್ಮ ಚರಣದುಂಡಿಗೆಯನೊತ್ತಯ್ಯಾ.
ವದನದಲ್ಲಿ ಷಡಕ್ಷರಿಯ ಬರೆಯಯ್ಯಾ, ಲಿಂಗದೇವಾ

- ಬ.ವ.ದೀ.495

"ದೇವಾ, ಲೋಕದ ಜನರಿಗೆ ಸೂರ್ಯೋದಯವಾದಾಗ ಬೆಳಗು; ಅದು ಹಗಲು. ಸೂರ್ಯಾಸ್ತವಾದಾಗ ಕತ್ತಲು, ಅದು ರಾತ್ರಿ. ನನ್ನ ಪಾಲಿಗೆ ಹಾಗಲ್ಲ. ನಿನ್ನನ್ನು ನೆನೆದಾಗ ಅದು ನನಗೆ ಸೂರ್ಯೋದಯವಾದಂತೆ, ಮನದ ಆಗಸದ ತುಂಬೆಲ್ಲ ಬೆಳಕೋ ಬೆಳಕು. ನಿನ್ನನ್ನು ಮರೆತರೆ ನನಗೆ ಸೂರ್ಯಾಸ್ತವಾದಂತೆ, ಕತ್ತಲೆ ಕವಿದು ಬಿಡುತ್ತದೆ. ನಿಮ್ಮ ಸ್ಮರಣೆಯೇ ನನಗೆ ಜೀವನ, ಪ್ರಾಣ ಕಾಣಾ ತಂದೆ. ಒಡೆಯ, ನನ್ನ ಪ್ರೀತಿಯ ಸ್ವಾಮಿ, ನನ್ನ ಹೃದಯದಲ್ಲಿ ನಿಮ್ಮ ಚರಣದ ಮುದ್ರೆಯನ್ನು ಒತ್ತು; ನನ್ನ ಮುಖ(ನಾಲಿಗೆ) ದಲ್ಲಿ ಷಡಕ್ಷರಿ ಮಂತ್ರವನ್ನು ಬರೆ." ಎಂದು ಲಿಂಗದೇವನಲ್ಲಿ ಧರ್ಮಗುರು ಬಸವಣ್ಣನವರು ಪ್ರಾರ್ಥಿಸುತ್ತಾರೆ.

498. ಕಾಯ ವೀಣೆ

ಎನ್ನ ಕಾಯವ ದಂಡಿಗೆಯ ಮಾಡಯ್ಯಾ,
ಎನ್ನ ಶಿರವ ಸೋರೆಯ ಮಾಡಯ್ಯಾ,
ಎನ್ನ ನರವ ತಂತಿಯ ಮಾಡಯ್ಯಾ,
ಎನ್ನ ಬೆರಳ ಕಡ್ಡಿಯ ಮಾಡಯ್ಯಾ.
ಬತ್ತೀಸ ರಾಗವ ಹಾಡಯ್ಯಾ, ಉರದಲೊತ್ತಿ ಬಾರಿಸು,
ಲಿಂಗದೇವಾ. - ಬ.ವ.ದೀ.496

"ದೇವಾ, ನಾನು ನಿಮ್ಮಲ್ಲಿ ಸಂಪೂರ್ಣವಾಗಿ ಶರಣಾಗಿದ್ದೇನೆ. ನನ್ನ ಶರೀರವನ್ನು ಒಂದು ದಂಡಿಗೆಯನ್ನಾಗಿ ಮಡು; ಶಿರವನ್ನು ಅದರ ತುದಿಯಲ್ಲಿರುವ ಸೋರೆಯನ್ನಾಗಿ ಮಾಡು; ಎನ್ನ ನರಗಳನ್ನು ಕಾಯ ವೀಣೆಯ ತಂತಿಗಳನ್ನಾಗಿ ಮಾಡು; ನನ್ನ ಬೆರಳನ್ನು ವೀಣೆಯನ್ನು ಮೀಟುವ ಕಡ್ಡಿಯನ್ನಾಗಿ ಮಾಡು. 32 ಮೂಲ ರಾಗಗಳನ್ನ ವೈಣಿಕನು ನುಡಿಸುವಂತೆ ನನ್ನ ಜೀವನ ವೀಣೆಯಿಂದ ದಿವ್ಯ ಸಂದೇಶದ ಧ್ವನಿ ಹೊರಡಿಸು. ತಂತಿಯನ್ನು ಒತ್ತಿ ಬಾರಿಸುವ ವೈಣಿಕನು ಬಗೆಬಗೆಯ ನಾದವನ್ನು ಹೊರಡಿಸುವಂತೆ ನೀನು ನನ್ನ ಹೃದಯವನ್ನು ಮೀಟಿ, ದಿವ್ಯ ಜೀವನದ ನಾದವನ್ನು ಹೊರಡಿಸು.

499. ಏಕ ದೇವತಾನಿಷ್ಠೆ

ಕುರುಳು ಬೆರಳು ಮುಡುಹು ಮುಂಬಲ್ಲು ಕೊಳ್ಳಾ
ನಿರಿಯನ್ನಿಕ್ಕಿ ದಾಂಟದಡೆ ಅಂತೆನ್ನ ನಂಬಾ,
ಪರಪುರುಷರ ಮುಖವ ನೋಡದಂತೆ ಮಾಡಾ;
ಬಳಿಕ ನೀನೆ ಹಗೆಯಿರಿಸಿದಂತೆ ಇರಿಸಾ.
ಎನ್ನ ಉರದಲ್ಲಿ ಕೂಡಲಸಂಗಯ್ಯನೆಂದು ಬರೆಯಾ;
ಹರಿ ಬ್ರಹ್ಮರಿಗೆರಗದಂತೆ ಬಳಿ ನೀರನೆರೆಯಾ. - ಬ.ವ.ದೀ.497

ಸಾಧಕ ಜೀವಿ ಬಸವಣ್ಣನವರ ಜೀವನದ 2ನೆಯ ಹಂತದಲ್ಲಿ ಬರುವ ಆರಾಧನಾ ವಿಧಾನ -ಏಕದೇವತಾ ನಿಷ್ಠೆ. ಬಹುದೇವತೋಪಾಸನೆಯು ಬಸವರಸರ ಮನೆಯ ಕುಲಾಚಾರ. ಶೈವ ಬ್ರಾಹ್ಮಣರಾಗಿಯೂ ಶಿವನೊಡನೆ ಅನ್ಯ ದೇವತೆಗಳ ಅರ್ಚನೆ ಮಾಡುತ್ತಿದ್ದರು. ಬಾಲ್ಯದಿಂದಲೂ ಇದನ್ನು ಬಸವರಸರು ವಿರೋಧಿಸಿದರು. ಉಪನಯನ ಸಂದರ್ಭದಲ್ಲಿ ಅಕ್ಕನಿಗೆ ಜನಿವಾರವನ್ನು ಕೊಡಲಾಗುವುದಿಲ್ಲ ಎಂದು ತಂದೆ ಹೇಳಿದುದನ್ನು ಪ್ರತಿಭಟಿಸಿ, ಮನೆಯನ್ನು ತೊರೆದು ಕೂಡಲ ಸಂಗಮಕ್ಕೆ ಬಂದರು. ಪಾಶುಪತ ಶೈವ ಪಂಥದ ಆ ಗುರುಕುಲದ ಕುಲಪತಿಗಳಾದ ಜಾತವೇದ ಮುನಿಗಳು ಬಾಲಕನ ಕಾಂತಿ, ಧೀಮಂತಿಕೆ, ಹಂಬಲ ನೋಡಿ, "ನೀನೆಲ್ಲಿಯೂ ಹೋಗಬೇಡ, ಯಾವುದಕ್ಕೂ ಚಿಂತೆ ಬೇಡ. ಸಂಗಮೇಶ್ವರ ಪೂಜೆಯನ್ನು ಕ್ರಮಬದ್ಧವಾಗಿ ಮಾಡು. ಗುರುಕುಲದ ಪ್ರಸಾದವನ್ನುಂಡು

ವಿದ್ಯಾಭ್ಯಾಸ ಮಾಡು" ಎಂದು ನುಡಿದರು. ಅಂದಿನಿಂದ ಬಸವರಸರು ಸಂಗಮೇಶ್ವರನ ಅರ್ಚಕರಾದರು; ಉತ್ಕಟವಾಗಿ ಪ್ರೇಮಿಸ ತೊಡಗಿದರು. ಶಿವನ ದರ್ಶನ, ಅನುಗ್ರಹಕ್ಕಾಗಿ ಹಂಬಲಿಸಲಾರಂಭಿಸಿದರು. ಅದು ದೊರೆಯುವಲ್ಲಿ ವಿಳಂಬವಾದಾಗ ತನ್ನ ಭಕ್ತಿಯಲ್ಲಿಯ ದೋಷವಿರಬಹುದೇ ಎಂದು ಆತ್ಮವಿಮರ್ಶೆ ಮಾಡಿಕೊಳ್ಳತೊಡಗಿದರು. ತಮ್ಮ ಶಿವನಿಷ್ಠೆಯಲ್ಲಿ ಕೊರತೆ ಇರಬಹುದೇ ಎಂದು ಪರೀಕ್ಷಿಸಿಕೊಳ್ಳುತ್ತಾ ಶಿವನಿಗೆ ಸವಾಲನ್ನು ಒಡುತ್ತಾರೆ.

"ಎಲೈ ನನ್ನ ಪ್ರೀತಿಯ ಪತಿಯೆ; ನೀನು ನನ್ನ ತಲೆ ಕೂದಲು ಕತ್ತರಿಸು, ಬೆರಳು, ಭುಜಗಳನ್ನು ಕಡಿ, ಮುಂದಿನ ಹಲ್ಲು ಉದುರಿಸು. (ನಿನ್ನ ಮೇಲಿನ ಪ್ರೇಮ ಕಡಿಮೆಯಾಗುವುದಿಲ್ಲ) ಒಂದು ಗುರಿ (ನಿರಿ)ಯನ್ನು ಗುರುತಿಸಿ (ರೇಖೆಯನ್ನು ಎಳೆದು) ಇದನ್ನು ದಾಟಬೇಡ ಎಂದು ಹೇಳು. ನಾನು ದಾಟುವುದಿಲ್ಲ, ಆಗಲಾದರೂ ನಂಬು. ಪರಪುರುಷರನ್ನು (ಅನ್ಯ ದೇವತೆಗಳನ್ನು) ಕಣ್ಣೆತ್ತಿ ನೋಡದಂತೆ ನನ್ನನ್ನು ಇರಿಸು. ಇಷ್ಟಾದರೂ ನನ್ನ ಮೇಲೆ (ಅನುಗ್ರಹ) ಪ್ರೀತಿಯ ದೃಷ್ಟಿ ಬೀರದೆ ಶತ್ರುವಿನಂತೆ ಕಾಣು. ಆದರೂ ನನ್ನ ಪ್ರೀತಿ (ಭಕ್ತಿ) ಕಡಿಮೆಯಾಗದು. ನನ್ನ ಹೃದಯದಲ್ಲಿ ಕೂಡಲ ಸಂಗಯ್ಯ ಎಂದೇ ಬರೆಸಿಕೊಳ್ಳಲು ಬಯಸುತ್ತೇನೆ. ಹರಿಬ್ರಹ್ಮಾದಿಗಳಿಗೆ ನಾನು ಮನಸ್ಸು ಮಾಡದಂತೆ ಪ್ರತಿಜ್ಞೆ ಮಾಡಿಸಿಕೋ. (ಆಣೆ ಇಡಿಸಿಕೋ) ವೈದಿಕ ಧರ್ಮದಲ್ಲಿ ಅಗ್ನಿಸಾಕ್ಷಿ ಮುಖ್ಯವಾದಂತೆ (ಸೀತೆಯನ್ನು ಅಗ್ನಿಪರೀಕ್ಷೆಗೆ ಒಳಪಡಿಸಿದಂತೆ) ಶೈವದಲ್ಲಿ ಎಳ್ಳು - ನೀರೆರೆಯುವುದು ಬಹುಮುಖ್ಯ. ಇಂಗಳೇಶ್ವರದಲ್ಲಿ ಒಂದು ಬಾವಿ ಇದೆ. ಅಲ್ಲಿನ ಆಖ್ಯಾಯಿಕೆ ಏನೆಂದರೆ ಬಸವರಸರು ಮನೆ ತೊರೆದು ಹೊರಟಾಗ ಸ್ವಲ್ಪ ದೂರ ಮನೆಯ ಮಂದಿ, ಕುಲದವರು ಸಮಾಧಾನ ಪಡಿಸಲು ಬೆನ್ನು ಹತ್ತುತ್ತಾರೆ. ನನಗಿನ್ನು ನೀವು ಸಂಬಂಧವಿಲ್ಲ ಎಂದು ಬಾವಿಯ ನೀರನ್ನು ಎರೆಯುತ್ತಾರೆ. ವಚನವೊಂದರಲ್ಲಿ ಬರುವ ವಾಕ್ಯ ಹೀಗಿದೆ, "ಅಂದೇಕೆ ಬಾರರು ನೀರಿಂಗೆ, ನೇಣಂಗೆ ಹೊರಗಾದಂದು (ಜನಿವಾರಕ್ಕೆ ಹೊರಗಾದುದು, ನೀರು ಬಿಟ್ಟುದು ಒಂದೇ ಸಮಯಕ್ಕೆ")ಎಂಬುದು ಇದರಿಂದ ನಮಗೆ ತಿಳಿದುಬರುವುದು. ಬಳಿ ನೀರನೆರೆಯಾ ಎಂಬ ಪ್ರಯೋಗವನ್ನು ಹೀಗೆ ಅರ್ಥೈಸಬಹುದು.

500. ದಿವ್ಯವಾದ ಕನಸು

ಕಂಡ ಕನಸು ನಿಧಾನವ ಕಂಡೆನಯ್ಯಾ,
ಬಿಡಲಾರದ ನಿಧಾನವ ಕಂಡೆನಯ್ಯಾ,
ಕೂಡಲ ಸಂಗಮದೇವಯ್ಯನೆಂಬ ನಿಧಾನವ ಕಂಡು ಬಿಡಲಾರೆನಯ್ಯಾ.
- ಬ.ವ.ದೀ-498

ದಿವ್ಯಾನುಭವಗಳ ಸಾಲಿನಲ್ಲಿ ಕನಸ್ಸು ಒಂದು ಆರಂಭಿಕ ಅನುಭವ. ಲೌಕಿಕ ಜನರು ಲೌಕಿಕ ಆಸೆ -ಆಕಾಂಕ್ಷೆಗಳನ್ನು ತೃಪ್ತಿಮಾಡುವ ಕನಸು ಕಂಡರೆ ಆಧ್ಯಾತ್ಮ ಜೀವಿಗಳು ಪಾರಮಾರ್ಥಿಕ ಜೀವನಕ್ಕೆ ಸಂಬಂಧಿಸಿದ ಕನಸು ಕಂಡು ಪುಳಕಗೊಳ್ಳುವರು.

"ನಾನು ಕಂಡ ಕನಸಿನಲ್ಲಿ ಒಂದು ಅಮೂಲ್ಯ ಸಂಪತ್ತನ್ನು ಕಂಡೆ; ಎಂದೆಂದೂ ಬಿಡಲಾರದ ನಿಧಿಯನ್ನು ಕಂಡೆ. ಬಹುದಿನಗಳಿಂದ ಹಂಬಲಿಸುತ್ತಿದ್ದ ಕೂಡಲ ಸಂಗಯ್ಯ ಎಂಬ ನಿಧಾನವ ಕಂಡು, ಬಿಡಲಾರೆನು." ಎಂದು ಕನಸು ಕಂಡು ಗುರು ಬಸವಣ್ಣನವರು ಪುಳಕಿತರಾಗಿ ಹೇಳುತ್ತಿದ್ದಾರೆ.

501. ಶಿವ ದರ್ಶನ

ಹೊನ್ನ ಹಾವುಗೆಯ ಮೆಟ್ಟದವನ ಮಿಡಿಮುಟ್ಟದ ಕೆಂಜೆಡೆಯವನ
ಮೈಯಲ್ಲಿ ವಿಭೂತಿಯ ಧರಿಸಿದವನ,
ಕರದಲ್ಲಿ ಕಪಾಲವ ಪಿಡಿದವನ,
ಅರ್ಧನಾರಿಯಾದವನ, ಬಾಣನ ಬಾಗಿಲ ಕಾಯ್ದವನ;

ನಂಬಿಗೆ ಕುಂಟಣಿಯಾದವನ,
ಚೋಳಂಗೆ ಹೊನ್ನಮಳೆಯ ಕರೆದವನ;
ಎನ್ನ ಮನಕ್ಕೆ ಬಂದವನ, ಸದ್ಭಕ್ತರ ಹೃದಯದಲ್ಲಿಪ್ಪವನ;
ಮಾಡಿದ ಪೂಜೆಯಲೊಪ್ಪುವನ
ಕೂಡಲ ಸಂಗಯ್ಯನೆಂಬವನ
ಕಂಡು ಬಿಡಲಾರೆನಯ್ಯಾ. – ಬ.ವ.ದೀ.467

ಉತ್ಕಟವಾದ ಭಕ್ತಿರತಿಯಿಂದ ಬಸವರಸರು ಸಾಧನಾ ಮಗ್ನರಾಗಿರುತ್ತಾರೆ. ಶಿವನ ದರ್ಶನ ಪಡೆಯುವ ಹಂಬಲವು ಗಾಢವಾಗಿರುತ್ತದೆ. ಒಂದು ದಿವಸ ಸಗುಣ ಸಾಕ್ಷಾತ್ಕಾರವಾಗಿ ಯೋಗಿರಾಜ ಶಿವನ ದರ್ಶನ ಪಡೆಯುತ್ತಾರೆ. ಆ ದಿವ್ಯಾನುಭವದ ಸಂಭ್ರಮವನ್ನು ಹೀಗೆ ಬಣ್ಣಿಸುತ್ತಾರೆ.

ಬಂಗಾರದ ಹಾವುಗೆಯನ್ನು ಮೆಟ್ಟಿದ್ದಾನೆ; ಕೆಂಜೆಡೆಯ ಮೇಲೆ ಒಂದು ಮಿಡಿಯು ಅಂದರೆ ಚಿಕ್ಕ ನಾಗರಹಾವು ಸುತ್ತಲ್ಪಟ್ಟಿದೆ. ಸರ್ವಾಂಗದಲ್ಲಿಯೂ ಅಲ್ಲಲ್ಲೇ ವಿಭೂತಿಯನ್ನು ಧರಿಸಿದ್ದಾನೆ. ಕೈಯೊಳಗೆ ಭಿಕ್ಷಾಪಾತ್ರೆಯನ್ನು ಹಿಡಿದಿದ್ದಾನೆ, ಅರ್ಧನಾರೀಶ್ವರನಾಗಿ ಅರ್ಧ ಶರೀರದಲ್ಲಿ ಪಾರ್ವತಿಯನ್ನು ಹೊಂದಿದ್ದಾನೆ. ಇವನು ಅಪಾರ ಭಕ್ತವತ್ಸಲ ಬಾಣಾಸುರನ ಬಾಗಿಲನ್ನು ಕಾಯ್ದ, ಸೌಂದರ ನಂಬಿಯು ತಾನು ಬಯಸಿದವಳನ್ನು ಪಡೆಯಲು ಕುಂಟಣಿ (ಮಧ್ಯವರ್ತಿ)ಯಾಗಿ ಕೆಲಸ ಮಾಡಿದ, ಚೋಳ ರಾಜನಿಗೆ ಹೊನ್ನಿನ ಮಳೆಯನ್ನೇ ಸುರಿಸಿದವನು.

ಇವನು ನನ್ನ ಮನವನ್ನು ಗೆದ್ದವನು, ಸದ್ಭಕ್ತರ ಹೃದಯದಲ್ಲಿ ನೆಲೆಸಿರುವವನು, ಮಾಡಿದ ಪೂಜೆಯನ್ನು ಸಹರ್ಷದಿಂದ ಸ್ವೀಕರಿಸುವವನು, ಕೂಡಲ ಸಂಗಯ್ಯ ಎಂಬ ಹೆಸರನ್ನು ಹೊಂದಿದವನು. ಸಗುಣ ಸಾಕ್ಷಾತ್ಕಾರ ಒಂದು ದಿವ್ಯಾನುಭವ. ನಾವು ಯಾವ ಆಕಾರದಲ್ಲಿ ಶ್ರದ್ಧೆಯಿಟ್ಟು ಆರಾಧಿಸುತ್ತೇವೆಯೋ ಆ ಆಕಾರದಲ್ಲಿ ದೇವ ಚೈತನ್ಯವು ದರ್ಶನವನ್ನು ನೀಡುತ್ತದೆ. ಈ ಚೈತನ್ಯವು ದೃಶ್ಯ-ಶ್ರಾವ್ಯ ಅನುಭವಕ್ಕೆ ಸಿಕ್ಕುತ್ತದೆ. ಟೆಲಿವಿಷನ್‌ನಲ್ಲಿ ತೋರುವ ರೂಪದಂತೆ, ಅಲ್ಲಿ ರೂಪದ ಜೊತೆಗೆ ಶಬ್ದವನ್ನು ಕೇಳುವಂತೆ. ಸಗುಣ ಸಾಕ್ಷಾತ್ಕಾರವು Audio-Visual form ಹೊಂದಿರುತ್ತದೆ. ನೀರಿಗೆ ಆಕಾರವಿಲ್ಲ ಅದು ಇಡಲ್ಪಟ್ಟ ಪಾತ್ರೆಯ ಆಕಾರವನ್ನು ಧರಿಸುತ್ತದೆ. ಹಾಗೆಯೇ ದೇವರು ನಿರಾಕಾರ, ಭಕ್ತನು ಆರಾಧಿಸುವ ರೂಪದಲ್ಲಿ ದೇವನು ದರ್ಶನ ನೀಡುವನು. ಕನಸಿನ ನಂತರದ ಅನುಭವ ಸಗುಣ ಸಾಕ್ಷಾತ್ಕಾರ (Revelation). ಕೆಲವು ನಾಸ್ತಿಕರು ವ್ಯಂಗ್ಯವಾಡುವಂತೆ ಇದು ತನ್ನ ಮನಸ್ಸಿನ ಭ್ರಾಂತಿಯಲ್ಲ, ಪರಮ ಸತ್ಯ.

502. ಬಾಲ್ಯದ ಪ್ರೇಮ

ಮನಕ್ಕೆ ಮನೋಹರವಲ್ಲದ ಗಂಡರು
ಮನಕ್ಕೆ ಬಾರರು ಕೇಳವ್ವಾ ಕೆಳದಿ.
ಪನ್ನಗಭೂಷಣನಲ್ಲದ ಗಂಡರು
ಇನ್ನೆನಗಾಗದ ಮೊರೆ, ನೋಡವ್ವಾ,
ಕನ್ನೆಯಂದಿನ ಕೂಟ ಚಿಕ್ಕಂದಿನ ಬಾಳುವೆ,
ನಿಮ್ಮಾಣೆಯಯ್ಯಾ, ಕೂಡಲ ಸಂಗಮದೇವಾ. – ಬ.ವ.ದೀ. 500

ಎಲೈ ಸ್ನೇಹಿತೆಯೇ, ನನ್ನ ಮನಸ್ಸಿಗೆ ಮುದ ತರದೆ ಇರುವ ಗಂಡರು ಎಷ್ಟೂ ಮೆಚ್ಚುಗೆಯಾಗರು. ಸರ್ಪಭೂಷಣನಲ್ಲದ ದೇವತೆಯು ನನಗೆ ಎಷ್ಟೂ ಸರಿ ಬರದ ಆಶ್ರಯ (ಮೊರೆ). (ಇದು ಮೋರೆ ಎಂದಿದ್ದರೆ ಇನ್ನೂ ಹೆಚ್ಚು ಹೊಂದಿಕೆಯಾಗುತ್ತದೆ. ಸರ್ಪಭೂಷಣನಲ್ಲದವನ ಮುಖ ನನಗೆ ಎಷ್ಟೂ ಇಷ್ಟವಾಗದು ಎಂಬ ಭಾವ ಬರುತ್ತದೆ). ನಾನು ಚಿಕ್ಕಂದಿನಿಂದಲೂ ಅವನನ್ನು ಪ್ರೀತಿಸುತ್ತಿದ್ದೇನೆ. ಕನ್ನೆ

ಭಕ್ತಿಯು ಅಳವಟ್ಟು, ಕೂಡಲ ಸಂಗಮನೇ ನಿನ್ನ ಆಣೆಯಾಗಿಯೂ ನಾನು ನಿನ್ನ ವಧು." ಹೀಗೆ ಬಸವರಸರು ಶಿವನ ಬಗ್ಗೆ ಇದ್ದ ಕನ್ನೆಯ ಭಕ್ತಿಯನ್ನು ವ್ಯಕ್ತಪಡಿಸುತ್ತಾರೆ.

503. ಮುತ್ತೈದೆ ಭಕ್ತಿ

ಜಗವೆಲ್ಲಾ ಅರಿಯಲು ಎನಗೊಬ್ಬ ಗಂಡನುಂಟು
ಆನು ಮುತ್ತೈದೆ ಆನು ನಿಟ್ಟೈದೆ.
ಕೂಡಲಸಂಗಯ್ಯನಂತಪ್ಪ, ಎನಗೊಬ್ಬ ಗಂಡನುಂಟು. – ಬ.ವ.ದೀ. 501

ಜಗವೆಲ್ಲಾ ಅರಿಯುವಂತೆ ನನಗೆ ಒಬ್ಬ ಗಂಡನಿದ್ದಾನೆ. ನಾನು ಮುತ್ತೈದೆ; ನಿಷ್ಠಾವಂತಳಾದ (ನಿಟ್ಟೈದೆ) ಪತ್ನಿ, ಕೂಡಲಸಂಗಯ್ಯನೆಂಬಂತಹ ಗಂಡನು ಎನಗಿದ್ದಾನೆ.

504. ಸತಿ ಭಕ್ತಿ

ಸಂಸಾರವೆಂಬ ಶ್ವಾನನಟ್ಟಿ ಮೀಸಲ ಬೀಸರವ ಮಾಡದಿರಯ್ಯಾ
ಎನ್ನ ಚಿತ್ತವು ನಿಮ್ಮ ಧ್ಯಾನವಯ್ಯಾ;
ನೀವಲ್ಲದೆ ಮತ್ತೇನನೂ ಅರಿಯೆನು.
ಕನ್ನೆಯಲ್ಲಿ ಕೈವಿಡಿದೆನು, ನಿಮ್ಮಲ್ಲಿ ನೆರೆದೆನು.
ಮನ್ನಿಸು ಕಂಡಾ, ಮಹಾಲಿಂಗವೆ,
ಸತಿಯಾನು, ಪತಿ ನೀನು, ಅಯ್ಯಾ.
ಮನೆಯೊಡೆಯ ಮನೆಯ ಕಾಯ್ದಿಪ್ಪಂತೆ
ನೀವೆನ್ನ ಮನವ ಕಾಯ್ದಿಪ್ಪ ಗಂಡನು!
ನಿಮಗೋತ ಮನವನನ್ಯಕ್ಕೆ ಹರಿಸಿದಡೆ
ನಿಮ್ಮಭಿಮಾನಕ್ಕೆ ಹಾನಿ, ಲಿಂಗದೇವಾ. – ಬ.ವ.ದೀ. 502

ಸಾಮಾನ್ಯವಾಗಿ ಸಂಸಾರ ಎಂದರೆ ನಾನು, ನನ್ನದು, ನನಗಾಗಿ ಎಂಬ ನಾನಿನ ಸರಪಳಿ. ಈ ವಚನದಲ್ಲಿ ಸಂಸಾರ ಎಂದರೆ ವಿಷಯಾಸಕ್ತಿ, ಇಂದ್ರಿಯಾಪೇಕ್ಷೆ ಇದನ್ನು ಸಾಧಕ ಜೀವಿ ಬಸವಣ್ಣನವರು ನಾಯಿಗೆ ಹೋಲಿಸುತ್ತಾರೆ. ಅಡಿಗೆಯನ್ನು ಮಾಡಿ, ನೈವೇದ್ಯ ಮಾಡಲೆಂದು ಇಟ್ಟಿರುತ್ತಾರೆ ಎಂದುಕೊಳ್ಳೋಣ. ಆಗ ನಾಯಿಯೊಂದು ಬಂದು ಅದನ್ನು ತಿಂದುಬಿಟ್ಟರೆ ಅದರ ಪಾವಿತ್ರ್ಯ ಕೆಡುತ್ತದೆ. ನೈವೇದ್ಯಕ್ಕೆ ಬಳಸುವುದಿಲ್ಲ. ಗುರುಬಸವಣ್ಣನವರಿಗೆ ವೈರಾಗ್ಯ ಜೀವನದ ಹಂಬಲ ಇತ್ತೆಂಬುದು ಇಲ್ಲಿ ವ್ಯಕ್ತವಾಗಿದೆ. ಅವರು ವಿವಾಹವನ್ನು ಮಾಡಿಕೊಳ್ಳಬೇಕಾಗಿ ಬಂದುದು ಒಂದು ಒತ್ತಡಕ್ಕೆ ಸಿಕ್ಕಿ ಎಂದು ಊಹಿಸಬಹುದು. ನನ್ನ ಊಹೆ ಹೀಗಿದೆ. ಪಾಲ್ಕುರಿಕೆ ಸೋಮನಾಥ ಮತ್ತು ಭೀಮಕವಿಯ ಪ್ರಕಾರ ಗುರುಬಸವಣ್ಣನವರಿಗೆ ಬಾಲ್ಯವಿವಾಹವಾಯಿತು. ಬಸವಪುರಾಣ, ಸಂಧಿ-4. ಪದ್ಯ 43 ಮುಂದೆ ಅವರು ವಿದ್ಯಾಭ್ಯಾಸಕ್ಕೆ ಹೋಗುತ್ತಾರೆ. ವಿದ್ಯಾಭ್ಯಾಸ ಪೂರ್ತಿಯಾದ ಮೇಲೆ ಬಹುಶಃ ಅಧಿಕೃತ ವಿವಾಹವನ್ನು ಮಾಡಿ ದಾಂಪತ್ಯ ಜೀವನಕ್ಕೆ ಅಣಿಮಾಡಬೇಕೆಂಬುದು ಮಾವ ಬಲದೇವರ ಇಚ್ಛೆ ಅದೇ ಉದ್ದೇಶದಿಂದ ಕೂಡಲಸಂಗಮಕ್ಕೆ ಅವರು ಹೋಗುತ್ತಾರೆ. ಈ ವಿಷಯದಲ್ಲಿ ಬಸವರಸರು ಆಸಕ್ತಿ ಕಳೆದು ಕೊಂಡಿರುತ್ತಾರೆ. ಆದರೆ, ಅವರಿಗೆ ಬಾಲ್ಯದಲ್ಲೇ ವಿವಾಹವಾದುದನ್ನು, ಇವರು ವಿದ್ಯಾಭ್ಯಾಸಪೂರೈಸುವುದನ್ನೇ ನೀಲಗಂಗಾ ನಿರೀಕ್ಷಿಸುತ್ತಿರುವುದನ್ನು ಬಲದೇವರಸರು ವಿವರಿಸುತ್ತಾರೆ. ಆಗ ಜಾತವೇದ ಮುನಿಗಳು ಒಮ್ಮೆ ವಿವಾಹವಾದ ಹೆಣ್ಣಿನ ಕಷ್ಟವೇನು? (ಹಿಂದಿನ ಕಾಲದಲ್ಲಿ ವಿವಾಹವಾ

ಗುವುದಿರಲಿ ಕೇವಲ ನಿಶ್ಚಯ ಆಗಿ ಬಿಟ್ಟರೆ ಅಂಥ ಹೆಣ್ಣನ್ನು ಬೇರೆಯವರು ವಿವಾಹವಾಗುತ್ತಿರಲಿಲ್ಲ.) ಎಂಬುದನ್ನು ಬಸವರಸರಿಗೆ ತಿಳಿಸುತ್ತಾರೆ. ನೀಲಗಂಗಳು ಸಹ ತಾನು ಬಸವರಸರ ಆದರ್ಶ ಜೀವನಕ್ಕೆ ಸಹಕರಿಸುವುದಾಗಿ ಮಾತುಕೊಡುತ್ತಾಳೆ. ಮುಂದೆ ಬಸವರಸರು ಮಂಗಳ ವೇಡೆಗೆ ಹೋಗುತ್ತಾರೆ. ವೈವಾಹಿಕ ಬದುಕನ್ನು ಆರಂಭಿಸುತ್ತಾರೆ. ಬಹುಶಃ ಅಂದು ಬರೆದಿರುವ ವಚನವಿದಿರಬಹುದೆಂದು ಊಹಿಸಬಹುದು.

ವಿಷಯಾಸಕ್ತಿ ಎಂಬ ನಾಯಿಯನ್ನು ಅಟ್ಟಿ ನನ್ನ ಮನಸ್ಸನ್ನು ಕಲಂಕಿತ ಗೊಳಿಸಬೇಡ ದೇವಾ. ನನ್ನ ಮನ (ಚಿತ್ತ)ವನ್ನು ನಿನಗೆ ನೈವೇದ್ಯ ಮಾಡಿದ್ದೇನೆ. ನಿಮ್ಮ ಹೊರತಾಗಿ ಮತ್ತೇನನ್ನು ಬಯಸಲು ನಾನು ಸಿದ್ಧವಿಲ್ಲ. ಲೋಕದ ದೃಷ್ಟಿಯಲ್ಲಿ ನಾನು ಕನ್ಯೆಯನ್ನು ವಿವಾಹವಾಗಿದ್ದೇನೆ. ಆದರೆ ನಾನು ಕೂಡಿರುವುದು ಮಾತ್ರ ನಿನ್ನನ್ನು, ನನ್ನನ್ನು ಕ್ಷಮಿಸು, ಮಹಾಲಿಂಗವೆ. (ಇದರಿಂದ ನನ್ನ ಪತ್ನಿಗೆ ಅಪಾರವಾದ ವ್ಯಥೆಯಾಗುತ್ತಿರಬಹುದು. ಆದರೆ ಇದು ಅನಿವಾರ್ಯ) ನಾನು ನಿನ್ನ ಸತಿ, ನೀನೆನ್ನ ಪತಿ, ಮನೆಯ ಮಾಲಿಕನು ತನ್ನ ಮನೆಯನ್ನು ಸುರಕ್ಷಿತವಾಗಿ ಸಂರಕ್ಷಿಸುವಂತೆ, ನೀನು ನನ್ನ ಮನಸ್ಸನ್ನು ಕಾಯುವ ಗಂಡನು. ಲಿಂಗದೇವಾ, ನನ್ನ ಮನಸ್ಸು ನಿನಗೆ ಸೋತು ಹೋಗಿದೆ. ಇಂಥ ಮನಸ್ಸನ್ನು ಬೇರೆ ಎಡೆಗೆ ಹರಿಸಿದರೆ ನಿಮ್ಮ ಮೇಲೆ ಇಟ್ಟ ಅಭಿಮಾನ (ಏಕನಿಷ್ಠೆ)ಕ್ಕೆ ಚ್ಯುತಿ ಬರುತ್ತದೆ.''

ಇದು ಬಹಳ ಅಮೂಲ್ಯ ವಚನ. ಗುರು ಬಸವಣ್ಣನವರ ವಿರಕ್ತಿ ಎಷ್ಟು ಗಾಢವಾಗಿತ್ತೆಂಬುದನ್ನು ಚಿತ್ರಿಸುತ್ತದೆ. (ಅನೇಕ ಢೋಂಗಿಗಳು ಸನ್ಯಾಸಿಗಳಾಗುವುದು ಹೆಣ್ಣು, ಹೊನ್ನು, ಮಣ್ಣುಗಳು ವಿಪುಲವಾಗಿ ಸಿಗುತ್ತವೆಂದು. ಸ್ವಯಂ ಪ್ರೇರಣೆಯಿಂದ ಸನ್ಯಾಸಿಗಳಾಗುವವರ ಉತ್ಕಟತೆ ಎಷ್ಟು ಪ್ರಬಲವಾಗಿರುತ್ತದೆಂದರೆ, ಅವರು ಲೌಕಿಕ ಜೀವನವನ್ನು ಯಾವ ಆಮಿಷಕ್ಕೂ, ಯಾರ ಒತ್ತಡಕ್ಕೂ ಒಳಗಾಗಿ ಸ್ವೀಕರಿಸುವವರಲ್ಲ. ಈ ಉತ್ಕಟ ಸ್ಥಿತಿಯನ್ನು ಅರ್ಥ ಮಾಡಿಕೊಳ್ಳಲಾರದ ಸಾಹಿತಿಗಳು ಬಹಳ ಹಗುರವಾಗಿ ಬರೆದುಬಿಡುತ್ತಾರೆ.) ಬಾಲ್ಯದಲ್ಲೇ ತಮಗೆ ತಿಳುವಳಿಕೆ ಮೂಡುವ ಮೊದಲೇ ವಿವಾಹವಾಗಿದ್ದರಿಂದ, ನೀಲಗಂಗಳಿಗೆ ಅನ್ಯಾಯ ಮಾಡಲಾರದ ಸಂದಿಗ್ಧತೆಗೆ ಒಳಗಾಗಿ ಲೋಕದ ಕಣ್ಣಿಗೆ ವೈವಾಹಿಕ ಬದುಕನ್ನು ಸ್ವೀಕರಿಸಿದಂತೆ ಕಾಣುತ್ತದೆ. ಈ ವಚನದ ಪ್ರಕಾರ, ಕನ್ನೆಯ ಕೈಹಿಡಿದರೂ, ಸಾಮರಸ್ಯ ಮಾತ್ರ ದೇವನೊಡನೆ ಎಂದಿದ್ದಾರೆ.

ಭಕ್ತನ ಐಕ್ಯ ಸ್ಥಲ

505. ದೇವನೊಲಿದವನೇ ಧನ್ಯ

ನೀನೊಲಿಯಿತ್ತೆ ಪುಣ್ಯ, ನೀನೊಲ್ಲದುದೆ ಪಾಪ
ಸಕಲ ಜಗದೊಳಗೆ ಅನುಶ್ರುತನಾಗಿಪ್ಪೆಯಯ್ಯಾ.
ನೀನೊಲಿದವನೆ ನಿಮ್ಮನರಿವನು.
ನೀನೊಲಿದವನೆ ಧನ್ಯ, ಜಗಕ್ಕೆ ಪಾವನ, ಲಿಂಗದೇವಾ. - ಬ.ವ.ದೀ. 503

ಗುರು ಬಸವಣ್ಣನವರ ತತ್ವಶಾಸ್ತ್ರದ ಪ್ರಕಾರ ಅನುಗ್ರಹ, ಕರುಣೆ ಬಹಳ ಮಹತ್ವಪೂರ್ಣ. ಪುಣ್ಯ-ಪಾಪಗಳನ್ನು ನಿರ್ಧರಿಸುವುದು ಈ ಅನುಗ್ರಹವೆ! ಶಿವನಿಗೆ ಅಂಬಲಿಯನ್ನುಣಿಸಿದ ಕಾಂಚೀಪುರದ ಮಾದಾರ ಚನ್ನಯ್ಯ, ಬಾಯಲ್ಲಿ ತುಂಬಿದ ನೀರನ್ನು ಶಿವಲಿಂಗದ ಮೇಲೆ ಉಗುಳಿದ ಬೇಡರ ಕಣ್ಣಪ್ಪ -ಇವರ ಪ್ರಸಂಗ ನೋಡೋಣ. ಒಂದು ದಿವಸ ಚನ್ನಯ್ಯ ಊಟಕ್ಕೆ ಕುಳಿತಿದ್ದಾನೆ. ತಟ್ಟೆಗೆ ನೀಡಿದ ಅಂಬಲಿ ಅತಿ ರುಚಿಯಾಗಿದೆ. ಒಮ್ಮೆ ಉಂಡ, ಅದರ ರುಚಿ ತುಂಬಾ ಚೆನ್ನಾಗಿದೆ. ತಕ್ಷಣ ತೆಗೆದ

-ಶಿವನಿಗೆ ಬೇಕೆಂದು. ಸಂಪ್ರದಾಯ ದೃಷ್ಟಿಯಿಂದ ಇದು ಎಂಜಲು -ಮೈಲಿಗೆ. ಅಲ್ಲಿ ಶಿವನಿಗೆ ಮೆಚ್ಚುಗೆಯಾದುದು ಶಿವನ ಮೇಲೆ ಚನ್ನಯ್ಯನಿಗೆ ಇದ್ದ ಪ್ರೀತಿ, ಭಕ್ತಿ. ಹಾಗೆಯೇ ಕಣ್ಣಪ್ಪ ಮಾಡಿದ್ದೆಲ್ಲ ಸಂಪ್ರದಾಯ, ಮಡಿವಂತರ ದೃಷ್ಟಿಯಲ್ಲಿ ಅನಾಚಾರ! ಆದರೆ ಶಿವನಿಗೆ ಅದೇ ಸದಾಚಾರ. ಅರ್ಚಕರು ಶಾಸ್ತ್ರೋಕ್ತ ಪೂಜೆಯನ್ನು ಸಂಗಮೇಶ್ವರನಿಗೆ ಮಾಡಿದ್ದರು. ಆದರೆ ಅರ್ಚಕರಾಗಿದ್ದ ತರುಣ ಬಸವರಸರು ಬಡಭಕ್ತರನ್ನು ಕರೆದುಕೊಂಡು ಬಂದು, ವನಸುಮಗಳನ್ನಾಯ್ದು ತಂದು, ಏನೂ ಅರಿಯೆನೆಂದು ಸುಮ್ಮಗಿದ್ದಿರಬೇಡ, ದಂದಣ ದತ್ತಣ ಎನ್ನಿ ಎಂದು ಅವರನ್ನು ಹುರಿದುಂಬಿಸಿ ಪೂಜಿಸಿದರು. ಅರ್ಚಕರಿಗೆ ಕೋಪ ಬಂದು ಬಸವರಸರನ ಮೇಲೆ ಹಲ್ಲೆ ಮಾಡಲು ಹೋದರು. ಬಸವಣ್ಣ ಮಾಡಿದ ಪೂಜೆಯೆ ದಿಟ ಎಂಬ ವಾಣಿ ಸಂಗಮೇಶ್ವರನಿಂದ ಬಂದಿತು. ಭಕ್ತನ ಭಕ್ತಿಗೂ, ದೇವನ ಅನುಗ್ರಹಕ್ಕೂ ನಿಕಟ ಸಂಬಂಧವಿದೆ. ಅದನ್ನೇ ಇಲ್ಲಿ ಹೇಳುತ್ತಾರೆ.

''ದೇವಾ, ನೀನೊಲಿಯಿತ್ತೇ ಪುಣ್ಯ, ನೀನೊಲ್ಲದುದೇ ಪಾಪ. ನಿನ್ನ ಅನುಗ್ರಹವಾಗಬೇಕಾದರೆ ಅಲ್ಲಿ ಪುಣ್ಯದ ಅಂಶ ಇರಲೇ ಬೇಕು. ಇದು ಹೇಗೆಂದರೆ ಪರಿಣಾಮದಿಂದ ಕಾರಣವನ್ನು ಊಹಿಸುವಂತೆ. ನಮ್ಮ ಮುತ್ತಾತ ಒಂದು ಬೀಜ ನೆಟ್ಟಿದ್ದರು. ಯಾವುದು ನೆಟ್ಟಿದ್ದರೋ ಗೊತ್ತಿಲ್ಲ. ಈಗದು ಮಾವಿನ ಹಣ್ಣು ಬಿಟ್ಟಿದೆ. ಇದರಿಂದ ನಿರ್ಧರಿಸುವುದೇನೆಂದರೆ ನಮ್ಮ ಮುತ್ತಾತ ನೆಟ್ಟಿದ್ದು ಮಾವಿನ ಬೀಜ. ಏಕೆಂದರೆ ಪರಮಾತ್ಮನು ಸಕಲ ಜಗತ್ತಿನಲ್ಲಿ ಸರ್ವವ್ಯಾಪಿ, ಸರ್ವದ್ರಷ್ಟಾರನೂ, ಎಲ್ಲವನ್ನೂ ಕಣ್ಣಲ್ಲಿ ಕಣ್ಣಿಟ್ಟು ನೋಡುವವನೂ ಆಗಿದ್ದಾನೆ. ದೇವನೊಲಿದವನೇ ಅವನನ್ನು ಅರಿಯಲು ಸಾಧ್ಯ. ದೇವರು ಮತ್ತು ಅವನ ಅನುಗ್ರಹ ರವಿ- ರಶ್ಮಿಯಂತೆ, ದೀಪ-ದೀಪ್ತಿಯಂತೆ. ಅವಿನಾಭಾವದಿಂದಿವೆ. ಸೂರ್ಯನ ಕಿರಣಗಳ ನೆರವಿನಿಂದ ನಾವು ಸೂರ್ಯನನ್ನು ನೋಡುತ್ತೇವೆ. ದೀಪದ ಬೆಳಕಿನಿಂದ ದೀಪವನ್ನು ನೋಡಲು ಸಾಧ್ಯ. ದೇವನ ಕೃಪಾದೃಷ್ಟಿ ಬೀಳದ ಹೊರತು ನಮ್ಮ ಚಿತ್ತ ಅವನ ಕಡೆಗೆ ಹೊರಳುವುದಿಲ್ಲ.

ಈ ಜಗತ್ತಿನಲ್ಲಿ ಯಾರು ಧನ್ಯರು, ಯಾರು ಪಾವನರು? ಲೋಕದ ದೃಷ್ಟಿಯಲ್ಲಿ ಬಹಳ ಹಣ ಉಳ್ಳವರು, ಅಂತಸ್ತುಳ್ಳವರು, ಅಧಿಕಾರ ಉಳ್ಳವರು ಧನ್ಯರು. ತೀರ್ಥಕ್ಷೇತ್ರ ಯಾತ್ರೆ ಮಾಡಿದವರು, ದೇವರ ಹುಂಡಿಯಲ್ಲಿ ಹಣ ಹಾಕುವವರು, ದೇವತಾ ವಿಗ್ರಹಕ್ಕೆ ಕಿರೀಟ, ಆಭರಣ ಮಾಡಿಕೊಡುವವರು ಪಾವನರು. ಗುರು ಬಸವಣ್ಣನವರ ದೃಷ್ಟಿಯಲ್ಲಿ ದೇವನ ಒಲುಮೆ ಪಡೆದವನೇ ಧನ್ಯ ಮತ್ತು ಪಾವನ - ಅವನು ಎಷ್ಟೇ ದೀನನಾಗಿದ್ದರೂ ಕೂಡ.

ಹೀಗೆ ದೇವನ ಒಲುಮೆಗೆ ಗುರು ಬಸವಣ್ಣನವರು ಅಗ್ರಸ್ಥಾನ ಕೊಟ್ಟಿದ್ದಾರೆ.

ತತ್ವಜ್ಞಾನದಲ್ಲಿ ಒಂದು ಪ್ರಶ್ನೆ ಚರ್ಚಿತವಾಗುತ್ತದೆ. ಅದು, ಪ್ರಯತ್ನ ಮೊದಲೋ, ಅನುಗ್ರಹ ಮೊದಲೋ ಎಂಬ ಬಗ್ಗೆ. ನಾವು ಉತ್ಕಟ ಪ್ರಯತ್ನ ಮಾಡಿದಾಗ ದೇವರ ಒಲುಮೆಯಾಗುವುದೋ? ಅಥವಾ ದೇವರ ಕೃಪೆ ನಮ್ಮ ಮೇಲೆ ಬಿದ್ದಾಗ ನಮ್ಮ ಚಿತ್ತವು ದೇವನೆಡೆಗೆ ಹರಿಯುವುದೋ? ಈ ಪ್ರಶ್ನೆ ಬೀಜ ಮೊದಲೋ ವೃಕ್ಷ ಮೊದಲೋ? ಎಂಬಂತಿರುವುದು. ನಿಮ್ಮ ಬದುಕನ್ನು ವೀಕ್ಷಿಸಿಕೊಂಡಾಗ 'ದೇವಾ, ನೀನೆಷ್ಟು ದಯಾಶೀಲ, ನಮ್ಮನ್ನು ಅಜ್ಞಾನ, ಮೂಢ ನಂಬಿಕೆಯಿಂದ ಪಾರು ಮಾಡಿ ನಿನ್ನ ಮಾರ್ಗಕ್ಕೆ (ಏಕದೇವೋಪಾಸನೆಗೆ) ಬಸವ ಪಥಕ್ಕೆ ಕರೆದುಕೊಂಡೆ.'' ಎನ್ನುತ್ತೀರಿ. ನಮ್ಮ ಬದುಕನ್ನೇ ವೀಕ್ಷಿಸಿಕೊಂಡಾಗ, ''ದೇವಾ, ಸಂಸಾರ ಬಂಧನಕ್ಕೆ ಸೂಕದೆ ನನ್ನನ್ನು ಪಾರು ಮಾಡಿದೆ. ಒಳ್ಳೆಯ ಜ್ಞಾನಿಗಳಾದ ಗುರುಗಳನ್ನು ತೋರಿಸಿ, ಬಸವ ಪಥಕ್ಕೆ ಆಯ್ದುಕೊಂಡೆ.'' ಎಂದು ಅಂದುಕೊಂಡಿದ್ದೇನೆ. ಗುರು ಬಸವಣ್ಣನವರನ್ನು ತನ್ನ ಪುತ್ರನನ್ನಾಗಿ ದೇವರು ಆಯ್ದುಕೊಂಡ. ಎಂಥಾ ಸುಂದರ ಹಾಗೂ

ಪರಿಪೂರ್ಣ ಧರ್ಮವನ್ನು ಅವರ ಮೂಲಕ ಕರುಣಿಸಿದ ಎಂದು ಖಂಡಿತಾ ಅನ್ನಿಸಿದೆ. ಹೀಗೆ ದೇವರ ಅನುಗ್ರಹ ಅದ್ಭುತ, ಅನುಪಮ!

506. ಅಂದಂದಿಗೆ ಶುದ್ಧವಾಗುವಿಕೆ

ಅಷ್ಟವಿಧಾರ್ಚನೆ ಷೋಡಷೋಪಚಾರವ
ಅಂದಂದಿನ ಕೃತ್ಯವನಂದಂದಿಗೆ ಆನು ಮಾಡಿ ಶುದ್ಧನಯ್ಯಾ
ಹಂಗು ಹರಿಯಿಲ್ಲದ ಕರಣ,
ಲಿಂಗದೇವ ನಿಷ್ಫಲದಾಯಕನಾಗಿ
ಆನು ಮಾಡಿ ಶುದ್ಧನಯ್ಯಾ! – ಬ.ವ.ದೀ. 504

ಇಷ್ಟಲಿಂಗಕ್ಕೆ ಅಷ್ಟವಿಧಾರ್ಚನೆ, ಜಂಗಮಕ್ಕೆ ಷೋಡಶೋಪಚಾರ-ಇವುಗಳನ್ನು ಅಂದಂದಿನ ಕೃತ್ಯಗಳನ್ನಾಗಿ ತಪ್ಪದೆ ಮಾಡಿ ನಾನು ಶುದ್ಧನಾಗುತ್ತೇನೆ. ನಾವೆಲ್ಲರೂ ಸೃಷ್ಟಿಕರ್ತನ ಹಂಗಿನಲ್ಲಿದ್ದೇವೆ. ಏಕೆಂದರೆ ಅವನು ಪಂಚಭೂತಾತ್ಮಕವಾದ ಜಗತ್ತನ್ನು ಸೃಷ್ಟಿಸಿದ್ದಾನೆ, ಮಾನವ ಜನ್ಮವನ್ನು ನಮಗೆ ದಯಪಾಲಿಸಿದ್ದಾನೆ. ನಿತ್ಯ ಲಿಂಗಾರ್ಚನೆಯನ್ನು ಮಾಡಿ, ಜಂಗಮ ದಾಸೋಹ (ಸಮಾಜಸೇವೆ) ವನ್ನು ಮಾಡಿ ದಿನ ದಿನವೂ ಋಣವನ್ನು ತೀರಿಸುವುದರಿಂದ ನಾನು ದೇವನ ಹಂಗನ್ನು ಹರಿದುಕೊಳ್ಳುತ್ತಿದ್ದೇನೆ. (ಋಣವನ್ನು ತೀರಿಸುತ್ತಿದ್ದೇನೆ). ಲಿಂಗದೇವನು ನಿಷ್ಫಲದಾಯಕ. ಅಂದರೆ ಫಲ ಇಲ್ಲದಂತೆ ಮಾಡುವವನು. ಮನುಷ್ಯನಿಗೆ ಭವ ಅಂದರೆ ಜನ್ಮಾಂತರ ಬರುವುದೇ ಫಲದಿಂದ ಉದಾ: ಬೀಜವು ಯಥಾರೂಪದಲ್ಲಿ ಇದ್ದರೆ ಅದು ಅಂಕುರ, ವೃಕ್ಷಕ್ಕೆ ಕಾರಣವಾಗುವುದು ಒಂದು ವೇಳೆ ಹುರಿಯಲ್ಪಟ್ಟರೆ ಅದು ಪುನರ್‌ಜನ್ಮಕ್ಕೆ ಕಾರಣವಾಗದು. ಹಾಗೆಯೇ ಪಾಪ -ಪುಣ್ಯಗಳೆಂಬ ಫಲಗಳು ಉಳಿದರೆ ಹೀನ ಜನ್ಮ -ಉತ್ತಮ ಜನ್ಮಗಳಿಗೆ ಕಾರಣವಾಗುವುವು. ಪರಮಾತ್ಮನ ಆರಾಧನೆಯಿಂದ ಫಲಗಳು ಹುರಿಯಲ್ಪಟ್ಟು ನಿಷ್ಫಲ ಸ್ಥಿತಿ ಪ್ರಾಪ್ತವಾಗುವುದು. ಇದರಿಂದ ಜೀವಾತ್ಮವು ಪರಿಶುದ್ಧಿಯನ್ನು ಸಾಧಿಸುವುದು.

ಇದು ಬಹಳ ಅಮೂಲ್ಯವಾದ ವಚನ. ಇದರ ಸಂದೇಶವು ಏನೆಂದರೆ:

1. ಪ್ರತಿಯೊಬ್ಬನೂ ದೇವನ ಋಣದಲ್ಲಿದ್ದಾನೆ.
2. ಸೃಷ್ಟಿಕರ್ತನ ಪೂಜೆ (ಅಷ್ಟವಿಧಾರ್ಚನೆ) ಮತ್ತು ಷೋಡಶೋಪಚಾರ (ಸಮಾಜ ಸೇವೆ) ಲಿಂಗದೇವನ ಋಣ ತೀರಿಸುವ ಸಾಧನಗಳು.
3. ಇದು ವರ್ಷಕ್ಕೊಮ್ಮೆಯೋ, ತಿಂಗಳಿಗೊಮ್ಮೆಯೋ, ವಾರಕ್ಕೊಮ್ಮೆಯೋ ನಡೆಯುವ ಕ್ರಿಯೆಯಾಗದೆ ದಿನ ನಿತ್ಯ ನಡೆಯುವ ಕ್ರಿಯೆಯಾಗಬೇಕು. ದಿನನಿತ್ಯ ಹೇಗೆ ನಾವು ಊಟ, ನಿದ್ರೆ ಇತ್ಯಾದಿ ತಪ್ಪದೆ ಮಾಡುತ್ತೇವೆಯೋ ಹಾಗೆ ಇಷ್ಟಲಿಂಗಾರ್ಚನೆಯನ್ನು, ಸಮಾಜ ಸೇವೆಯನ್ನು ಸಹ ಅಂದಂದಿಗೆ ಮಾಡಿ ಶುದ್ಧರಾಗಬೇಕು. ಅವು ನಮ್ಮ ಭವದ ಬೇರನ್ನು ಕತ್ತರಿಸುವ ಸಾಧನಗಳು.

507. ಫಲದಾಸೆ ಬೇಡ

ಮಾಟ ಕೂಟ, ಫಲ ಪ್ರಾಪ್ತಿ ಎಂಬ ಮಾತು ಕೇಳಲಾಗದು ಶಿವಶಿವಾ!
ನಿಮ್ಮ ಭಕ್ತರಿಗೆ ಮಾಡಿದೆನೆನ್ನದಿರೆಂದು
ಶ್ರೀಗುರುಲಿಂಗವು ಕೃಪೆಯ ಮಾಡಿದ ಕಾರಣ,
ಅಲ್ಲಿ ಮಾಡುವವರೂ ಮಾಡಿಸಿಕೊಂಬವರೂ ನೀವೆ
ಲಿಂಗದೇವಾ.
– ಬ.ವ.ದೀ. 505

ನಾವು ಮಾಡುವ ಸತ್ಕಾರ್ಯದಿಂದ (ಮಾಟ) ಲಿಂಗದೇವನ ಕೂಟ ಸಾಧ್ಯವಾಗುವುದು. ಉತ್ತಮ ಫಲವು ದೊರೆಯುವುದು. ಎಂಬ ಮಾತುಗಳನ್ನು ಕೇಳಲಿಕ್ಕೆ ಸಾಧ್ಯವಾಗದು. ದೇವನ ಭಕ್ತರಿಗೆ ಮಾಡಿದೆನು ಎಂಬ ಹಮ್ಮಿನ ಮಾತುಗಳನ್ನು ಆಡಬಾರದು. ಏಕೆಂದರೆ ಲಿಂಗದೇವನೆ, ಮಾಡುವವರೂ ನೀವೆ, ಮಾಡಿಸಿಕೊಳ್ಳುವವರೂ ನೀವೆ!

508. ಅನುಭಾವದ ಒಡನಾಟ

ಅಯ್ಯಾ, ನಿಮ್ಮ ಅನುಭಾವದಿಂದ ಎನ್ನ ತನು ಹಾಳಾಯಿತ್ತಯ್ಯಾ.
ಅಯ್ಯಾ, ನಿಮ್ಮ ಅನುಭಾವದಿಂದ ಎನ್ನ ಮನ ಹಾಳಾಯಿತ್ತಯ್ಯಾ
ಅಯ್ಯಾ, ನಿಮ್ಮ ಅನುಭಾವದಿಂದ ಎನ್ನ ಕರ್ಮಭೇದನವಾಯಿತ್ತಯ್ಯಾ,
ನಿಮ್ಮವರು ಅಡಿಗಡಿಗೆ ಹೇಳಿ ಭಕ್ತಿಯೆಂಬ ಒಡವೆಯ
ದಿಟವ ಮಾಡಿ ತೋರಿದರು ಕಾಣಾ, ಲಿಂಗದೇವಾ.
– ಬ.ವ.ದೀ. 506

ಅನುಭಾವ ಎಂಬುದರ ಅಂತರ್ಯ ತಿಳಿಯೋಣ. ಪಂಚ ಜ್ಞಾನೇಂದ್ರಿಯ, ಪಂಚ ಕರ್ಮೇಂದ್ರಿಯಗಳ ಮೂಲಕ ಪಡೆಯುವುದು ಅನುಭವ. ಹೃದಯದ ಮೂಲಕ ದೇವನಿಗೆ ಸಂಬಂಧಿಸಿದಂತೆ ಪಡೆಯುವ ಅನುಭವವೇ ಅನುಭಾವ.

ದೇವಾ, ನಿಮ್ಮ ದಿವ್ಯವಾದ ಅನುಭವವನ್ನು ಪಡೆದುದರಿಂದ ನನ್ನ ಶರೀರವು ತನ್ನ ಸ್ವಾಭಾವಿಕ ಗುಣಗಳನ್ನು ಕಳೆದುಕೊಂಡಿತು. ಹಸಿವು, ತೃಷೆ, ನಿದ್ರೆ ಇವು ಶರೀರದ ದೌರ್ಬಲ್ಯಗಳು. ದೇವನ ಆರಾಧನೆಯಿಂದ ಇವುಗಳನ್ನು ಗೆಲ್ಲಲು ಸಾಧ್ಯವಾಗುವುದು. ದೇವಾ, ನಿಮ್ಮ ದಿವ್ಯ ಅನುಭವ ಪಡೆದುದರಿಂದ ನನ್ನ ಮನಸ್ಸು ತನ್ನ ಸ್ವಾಭಾವಿಕ ಗುಣಗಳನ್ನು ಕಳೆದು ಕೊಂಡಿತು. ಮನದ ದೌರ್ಬಲ್ಯಗಳೆಂದರೆ ಅರಿಷಡ್ವರ್ಗಗಳಾದ ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರ. ದೇವನ ದಿವ್ಯ ಅನುಭವದಿಂದ ಕರ್ಮಭೇದನವಾಗುವುದು. ಶರಣನು ಪಾಪ-ಪುಣ್ಯಗಳಿಗೆ ಅತೀತವಾಗಿ ನಿಲ್ಲುವನು.

ಇಂಥ ದಿವ್ಯಾನುಭವ (ಅನುಭಾವ) ಪಡೆಯಲು ನೆರವಾದುದು ಯಾವುದು? ನಿಮ್ಮವರ ಒಡನಾಟ; ಅಂದರೆ ಶರಣರ ಸತ್ಸಂಗ. ಹಿರಿಯ ಅನುಭಾವಿಗಳಾದ ಶರಣರು ಅಡಿಗಡಿಗೆ ಅಂದರೆ ಹೆಜ್ಜೆ ಇಡುವಲ್ಲಿ ಮಾರ್ಗದರ್ಶನ ಮಾಡಿ ಭಕ್ತಿ ಎಂಬುದು ಒಂದು ಒಡವೆ, ಸಂಪತ್ತು ಜೀವನಕ್ಕೆ ಆಭರಣ ಎಂಬುದನ್ನು ಸತ್ಯವನ್ನಾಗಿ ಮಾಡಿ ತೋರಿಸುವರು. ಭಕ್ತಿ ಎಂಬುದು ಭ್ರಾಂತಿಯಲ್ಲ, ಅದು ಪರಮ ಸತ್ಯವಾದ ಪರಮಾತ್ಮ ಲಿಂಗದೇವನನ್ನು ತೋರಿಸಿ ಕೊಡುವ ಸಾಧನ ಎಂಬುವಕ್ಕೆ ಸಹಾಯಕವಾಗುವುದು ಶರಣರ ಸತ್ಸಂಗ.

509. ಷಟಸ್ಥಲಿಯ ಲಕ್ಷಣಗಳು

ಭಕ್ತನೆಂತೆಂಬೆನಯ್ಯಾ,
ಭವಿಯ ಸಂಗ ಬಿಡದನಕ್ಕ?
ಮಾಹೇಶ್ವರನೆಂತೆಂಬೆನಯ್ಯಾ
ಪರಸ್ತ್ರೀ ಪರರರ್ಥದಾಸೆ ಬಿಡದನ್ನಕ್ಕ?
ಪ್ರಸಾದಿಯೆಂತೆಂಬೆನಯ್ಯಾ
ಆದಿವ್ಯಾಧಿ ನಷ್ಟವಾಗದನ್ನಕ್ಕ?
ಪ್ರಾಣಲಿಂಗಿಯೆಂತೆಂಬೆನಯ್ಯಾ

ಪ್ರಾಣ ಸ್ವಸ್ಥಿರವಾಗದನ್ನಕ್ಕ?
ಶರಣನೆಂತೆಂಬೆನಯ್ಯಾ ಪಂಚೇಂದ್ರಿಯ ನಾಶವಾಗದನ್ನಕ್ಕ!
ಐಕ್ಯನೆಂತೆಂಬೆನಯ್ಯಾ
ಜನನ ಮರಣ ವಿರಹಿತವಾಗದನ್ನಕ್ಕ, ಲಿಂಗದೇವಾ?

- ಬ.ವ.ದೀ. 507

ಬಹಳ ಮಹತ್ವಪೂರ್ಣವಾದ ವಚನವಿದು. ಷಟಸ್ಥಲದ ವಿವಿಧ ಹಂತಗಳಲ್ಲಿ ಇರುವ ಸಾಧಕನ ಆಚಾರ-ವಿಚಾರಗಳನ್ನು ಕುರಿತು ವಿವರಿಸುತ್ತದೆ. ಭಕ್ತನ ಹಲವಾರು ಲಕ್ಷಣಗಳಲ್ಲಿ ಮುಖ್ಯ ಲಕ್ಷಣಗಳನ್ನು ವಿವರಿಸುವುದು ತೀರಾ ಕಷ್ಟಸಾಧ್ಯದ ಸಂಗತಿ. ಲಿಂಗಾಯತ ಧರ್ಮವು ಸಂಸ್ಥಾಪನೆಗೊಂಡು ದಾಪುಗಾಲಿಟ್ಟು ಪ್ರಗತಿ ಸಾಧಿಸುವ ಕಾಲದಲ್ಲಿ ಭಕ್ತ ಎಂದರೆ ಲಿಂಗಧಾರಣೆ ಮಾಡಿಕೊಂಡು ಸಂಸ್ಕಾರ ಹೊಂದಿದವನು; ಭವಿ ಎಂದರೆ ದೀಕ್ಷಾ ಸಂಸ್ಕಾರ ಹೊಂದದೆ ಇರುವವನು. ಸಂಸ್ಕಾರ ಹೊಂದಿದವರು ಹೊಂದದೆ ಇರುವವರೊಡನೆ ಬೆರೆಯಬಾರದು, ಅನ್ನಪಾನಾದಿಗಳನ್ನು ಸ್ವೀಕರಿಸಬಾರದು ಎಂಬ ನಿಯಮವನ್ನು ಹಾಕಲಾಗುತ್ತಿತ್ತು. ಮನೋವೈಜ್ಞಾನಿಕವಾಗಿ ಇದು ಸರಿ. ಇದಕ್ಕೊಂದು ಸುಂದರ ದೃಷ್ಟಾಂತ ಹೇಳಬಹುದು. ಹಾಲು ಪರಿಶುದ್ಧವಾಗಿರಬೇಕು. ಅದಕ್ಕೆ ನೀರು ಬೆರಸಬಾರದು. ಒಂದು ವೇಳೆ ನೀರು ಬೆರೆಸುವುದಾದರೆ ಮುಕ್ಕಾಲು ಲೀಟರ್ ಹಾಲಿಗೆ ಕಾಲು ಲೀಟರ್ ನೀರು ಬೆರೆಸಿದರೆ ಆಗ ಕಾಲು ಲೀಟರ್ ನೀರಿಗೂ ಹಾಲಿನ ಬೆಲೆ ಬರುತ್ತದೆ. ಮುಕ್ಕಾಲು ಲೀಟರ್ ನೀರಿಗೆ ಬೆರೆಸಿದರೆ ಕಾಲು ಲೀಟರ್ ಹಾಲು ತನ್ನ ಬೆಲೆಯನ್ನು ಕಳೆದುಕೊಳ್ಳುತ್ತದೆ. ಇದೇ ರೀತಿ ಭವಿಗಳ ಜೊತೆ ಹೆಚ್ಚು ಒಡನಾಡಿದರೆ ಭಕ್ತನು ತನ್ನ ನಿಷ್ಠೆಯನ್ನು ಕಳೆದುಕೊಳ್ಳುತ್ತಾನೆ.

ಸಾಮಾನ್ಯವಾಗಿ ಮನುಷ್ಯ ಒಳ್ಳೆಯದನ್ನು ಕಲಿಯಲು, ಅದನ್ನು ಉಳಿಸಿಕೊಳ್ಳಲು ಕಷ್ಟಪಡಬೇಕು. ಕೆಟ್ಟದ್ದನ್ನು ವ್ಯಕ್ತಿಯು ಸುಲಭವಾಗಿ ಕಲಿಯುತ್ತಾನೆ. ಸಸ್ಯಾಹಾರಿಯಾಗಿರಲು ಮದ್ಯಪಾನ ಮಾಡದಿರಲು ಹೆಚ್ಚಿನ ಸಂಕಲ್ಪ ಶಕ್ತಿ ಬೇಕು. ಮಾಂಸಾಹಾರಿಗಳ ನಿಕಟವಾದ ಒಡನಾಟದಿಂದ ತಾನೂ ಮಾಂಸಾಹಾರಿಯಾಗುವನು; ಮದ್ಯಪಾನಿಗಳ ಸಂಗದಿಂದ ತಾನೂ ಕುಡುಕನಾಗುವನು. ತನ್ನನ್ನು ತಾನು ರಕ್ಷಿಸಿಕೊಳ್ಳಲಿ ಎಂದೇ ಶರಣರ ಸತ್ಸಂಗದ ಬಗ್ಗೆ ಒತ್ತಿ ಒತ್ತಿ ಹೇಳಲಾಗುವುದು.

ಇಂದಿನ ಸಾಮಾಜಿಕ ಪರಿಸ್ಥಿತಿಯಲ್ಲಿ ಭಕ್ತನು ಭವಿಸಂಗವನ್ನು ಬಿಡಬೇಕು ಎನ್ನುವುದು ಸಂಕುಚಿತತೆ ಮತ್ತು ಮತಾಂಧತೆಗೆ ಕಾರಣವಾಗುವುದು. ಒಂದು ವಾರದ ಕೆಳಗಡೆ ಒಬ್ಬ ಭಕ್ತರು ಬಂದರು. ಬಸವ ಮಂಟಪಕ್ಕೆ ಬರುವ ಮತ್ತೊಬ್ಬ ಭಕ್ತರು ಅವರನ್ನು ಪ್ರಾರ್ಥನೆಗೆ ಕರೆದಾಗ ಅದು ಲಿಂಗಾಯತ ಮಠವಾ? ಹಾಗಿದ್ದರೆ ನಾನು ಬರಲ್ಲ' ಎಂದರಂತೆ. ಅವರು, ಒಮ್ಮೆ ಬಂದು ನೋಡು. ಎಂದಾಗ ಬಂದರು. ತಮ್ಮ ಜೀವನದ ಒಂದು ಕಹಿ ಘಟನೆ ಕುರಿತು ಹೇಳಿದರು. ಅವರು ಒಂದು ಮಠಕ್ಕೆ ಬಹಳ ವರ್ಷಗಳಿಂದಲೂ ನಡೆದುಕೊಳ್ಳುತ್ತಿದ್ದರು. ಒಮ್ಮೆ ಅವರ ತಾತ ಮತ್ತು ಇವರು ತಾವು ಬೆಳೆದ ದವಸ-ಧಾನ್ಯ ತೆಗೆದುಕೊಂಡು ಹೋಗಿ ಕೊಟ್ಟು ನಂತರ ಪ್ರಸಾದಕ್ಕೆ ಕುಳಿತಿದ್ದರು ಇನ್ನಿತರರೊಡನೆ. ಆಗ ಕೆಲವರು ಬಂದು ಎಲ್ಲರನ್ನೂ ತನಿಖೆ ಮಾಡಿ ಇವರು ಲಿಂಗಧಾರಿಗಳಲ್ಲವೆಂದು ಊಟಕ್ಕೆ ಕುಳಿತವರನ್ನು ಎಬ್ಬಿಸಿ, ಹೊರಗೆ ಹಾಕಿಸಿದರಂತೆ. ಅಂದಿನಿಂದ ಇವರು ಲಿಂಗಾಯತರ ಮಠಕ್ಕೆ ಕಾಲಿಟ್ಟಿಲ್ಲವಂತೆ. ಒಂದು ತಿಂಗಳ ಹಿಂದೆ ಇಬ್ಬರು ಬಂದರು. ತಮಗೆ ದೀಕ್ಷೆ ಬೇಕೆಂದು ಕೇಳಿದರು. ಆಗ ಪೂಜ್ಯ ಬಸವ ಕುಮಾರ ಸ್ವಾಮೀಜಿ ಒಂದು ದಿನ ನಿಶ್ಚೈಸಿ ಬರಲು ಹೇಳಿದರು. ದೀಕ್ಷೆ ಪಡೆದು ತುಂಬಾ ಸಂತೋಷಪಟ್ಟರು. ದೀಕ್ಷಾನಂತರ ಪ್ರಸಾದ ಸ್ವೀಕರಿಸಿ ಹರ್ಷದಿಂದ ಹೋದರು. ಅವರು ತೀರಾ

ಪ್ರಸಿದ್ಧವಾದ ಒಂದು ಮಠಕ್ಕೆ ಹೋಗಿ ದೀಕ್ಷೆ ಕೇಳಿದಾಗ, ನೀವು ಯಾವ ಜಾತಿ, ಉದ್ಯೋಗದವರು. ಯಾವೂರಿನವರು? ಎಂದೆಲ್ಲ ಕೇಳಲಾರಂಭಿಸಿದ್ದರಿಂದ ಮುಜುಗರ ಪಟ್ಟು ವಾಪಸ್ಸು ಬಂದಿದ್ದರಂತೆ. ಬಹುಶಃ ದಲಿತ ಸಮುದಾಯದವರಿರಬಹುದು. ನಮ್ಮಲ್ಲಿ ಯಾರೂ ಆ ರೀತಿ ಕೇಳಲಿಲ್ಲ. ಸ್ವಯಂ ಪ್ರೇರಣೆಯಿಂದ ದೀಕ್ಷೆ ತೆಗೆದುಕೊಳ್ಳಲು ಬಂದವರ ಕುಲಜಾತಿ ಉದ್ಯೋಗದ ಬಗ್ಗೆ ನಮ್ಮ ಮಠಾಧಿಪತಿಗಳು ತನಿಖೆ ಮಾಡಿ, ದೀಕ್ಷೆ ನಿರಾಕರಿಸುವ ಸಂಕುಚಿತತೆ ಕಂಡಾಗ ಮನಸ್ಸಿಗೆ ತುಂಬಾ ದುಃಖವೆನಿಸಿತು. ಕ್ರೈಸ್ತರು, ಮುಸಲೀಮರು ಗಬಕ್ಕನೆ ನುಂಗಲು ಬಗೆಬಗೆಯ ತಂತ್ರ ಅನುಸರಿಸುತ್ತಾರೆ, ಆಮಿಷ ಒಡ್ಡುತ್ತಾರೆ. ಆದರೆ ನಮ್ಮ ಮಠಾಧಿಶರು ಅಧ್ಯಾತ್ಮಿಕ ಅಭೀಪ್ಸೆಯಿಂದ ಬಂದವರಿಗೂ ದೀಕ್ಷೆ ಕೊಡಲು ಹಿಂಜರಿಯುತ್ತಾರೆ ಎಂಬುದು ವಿಷಾದನೀಯುವಲ್ಲವೆ? ಮಠಗಳಲ್ಲಿ, ಮಠಗಳು ನಡೆಸುವ ಹಾಸ್ಟೆಲಿನಲ್ಲಿ, ದಾಸೋಹದಲ್ಲಿ ಜಾತಿಭೇದ ಮಾಡುವುದು ಬಸವ ಧರ್ಮಕ್ಕೆ ಅಪಮಾನಕರವಲ್ಲವೆ?

ಇದೇ ಸನ್ನಿವೇಶದಲ್ಲಿ ಇನ್ನೊಂದು ಸಮಸ್ಯೆ ಏನೆಂದರೆ ಭವಿ-ಭಕ್ತದ ವ್ಯಾಖ್ಯೆ ಏನು? ಲಿಂಗಧಾರಿ ಭಕ್ತ, ಲಿಂಗವಿರಹಿತ ಭವಿ. ಎಂದರೆ ಬಹುಪಾಲು ಲಿಂಗಾಯತರ ಕೊರಳಲ್ಲಿ ಇಷ್ಟಲಿಂಗವಿರದು. ಈಗಂತೂ ಅನಾಚಾರ ಮಿತಿ ಮೀರುತ್ತಿದೆ. ಬಸವ ಮಂಟಪಕ್ಕೆ ಬರುವ ಓರ್ವಭಕ್ತರು, ಹುಟ್ಟಿನಿಂದ ಮಾಂಸಾಹಾರಿ ಜಾತಿಯವರಾದರೂ, ಪೂರ್ತಿ ಶಾಕಾಹಾರಿಯಾಗಿ, ಏಕದೇವೋಪಾಸಕ, ಬಸವ ಭಕ್ತರಾಗಿದ್ದಾರೆ. ಅವರು ಹೊಸಮನೆ ಕಟ್ಟಿಸಿದರು. ಬಾಡಿಗೆಗೆ ಬರುವವರು ಮಾಂಸಾಹಾರಿಗಳಾದರೆ ತಮಗೆ ಸರಿಯಾಗದು ಎಂದು ಬಹಳ ದಿನಗಳವರೆಗೆ ಕಾಯ್ದು ಲಿಂಗಾಯತರಿಗೆ ಕೊಟ್ಟರು. ಅವರು ಮನೆಗೆ ಬಂದ ತಕ್ಷಣ ಹೋಮ ಮಾಡಿಸಿದ್ದು ನೋಡಿ, ಇವರೆಂಥಾ ಲಿಂಗಾಯತರು ಎಂದು ಆಶ್ಚರ್ಯ ಪಡುವಾಗ. ಆವರು ಕೋಳಿಮೊಟ್ಟೆ ತಿಂದು ಸಿಪ್ಪೆಯನ್ನು ರಾಶಿ ಹಾಕಿದಾಗ ದಿಗ್ಭ್ರಾಂತರಾಗಿದ್ದಾರೆ. ಇದನ್ನೆಲ್ಲ ನೋಡಿದಾಗ ಭವಿ-ಭಕ್ತ ಎಂಬುವ ವರ್ಗೀಕರಣವನ್ನು ಜಾತಿಯ ಆಧಾರದ ಮೇಲೆ ಮಾಡದೆ ಗುಣ-ನಡತೆ, ಆಚಾರ-ವಿಚಾರದ ಮೇಲೆ ಮಾಡಬೇಕಾಗುವುದು ಎನ್ನಿಸದಿರದು.

ಮಾಹೇಶ್ವರ ಸ್ಥಲಕ್ಕೆ ಏರುವವನು ಪರಸ್ತ್ರೀ- ಪರಧನದ ಆಸೆಯನ್ನು ಮಾಡ ಬಾರದು. ಗೃಹಸ್ಥನು ತನ್ನ ಸತಿಯ ಹೊರತು ಪರಸ್ತ್ರೀಯನ್ನು ಕಣ್ಣೆತ್ತಿಯೂ ನೋಡಬಾರದು, ಪರಧನವನ್ನು ಅಪಹರಿಸಬಾರದು. ವಿರಕ್ತನು ಎಲ್ಲ ಸ್ತ್ರೀಯರನ್ನು ತನ್ನ ತಾಯಿಯ ಸ್ವರೂಪದಲ್ಲಿ ಕಾಣಬೇಕು; ಧರ್ಮ ಮಾರ್ಗದ ಹೊರತು ಅನ್ಯ ಮಾರ್ಗದಲ್ಲಿ ಹಣವನ್ನು ಸಂಗ್ರಹಿಸಬಾರದು.

ಪ್ರಸಾದಿಯ ಲಕ್ಷಣವೆಂದರೆ ಆದಿವ್ಯಾಧಿ ನಷ್ಟವಾಗಿರಬೇಕು. ಆದಿವ್ಯಾಧಿ ಎಂದರೆ ಮಾನಸಿಕ ತೊಂದರೆಗಳಾದ ಉದ್ವೇಗ, ಕೋಪ, ರಾಗದ್ವೇಷ ಇತ್ಯಾದಿ. ಪ್ರಸಾದಿಯ ಲಕ್ಷಣವೆಂದರೆ ಚಿತ್ತ ಸಮತೆ, ಶಾಂತ ವೃತ್ತಿ ಅವನು ಮಾನಸಿಕ ವಿಕೃತಿಗಳನ್ನು ನಷ್ಟ ಮಾಡಿಕೊಂಡಿರಬೇಕು. ಜೀವನದಲ್ಲಿ ಸುಖವೇ ಬರಲಿ, ದುಃಖವೇ ಬರಲಿ ಎಲ್ಲವೂ ಲಿಂಗದೇವನ ಪ್ರಸಾದವೆಂದು ಸ್ವೀಕರಿಸುವುದೇ ಪ್ರಸಾದಿಯ ಲಕ್ಷಣ. ಹೀಗಾಗಿ ಪ್ರಸಾದಿಯು ಎಂಥಾ ಪ್ರಸಂಗದಲ್ಲೂ ಧೃತಿಗೆಡುವುದಿಲ್ಲ, ಮಾನಸಿಕ ಕ್ಷೋಭೆಯಿಂದ ಉದ್ವಿಗ್ನನಾಗುವುದಿಲ್ಲ. ಪ್ರಾಣಲಿಂಗಿಯ ಲಕ್ಷಣವೆಂದರೆ ಪ್ರಾಣವು ಸ್ವಸ್ಥಿರವಾಗುವುದು. ಮನಸ್ಸಿಗೂ ಪ್ರಾಣಕ್ಕೂ ನಿಕಟ ಸಂಬಂಧವಿರುತ್ತದೆ. ಮನಸ್ಸು ಉದ್ವಿಗ್ನಗೊಂಡಾಗ ಉಸಿರಾಟ (ಪ್ರಾಣ)ವು ವಿರಳಿತಗೊಳ್ಳುವುದು, ತೀವ್ರವಾಗುವುದು. ಸ್ವಸ್ಥಿರವಾಗುವುದು ಎಂದರೆ ಪ್ರಾಣದ ಮೇಲೆ ನಿಯಂತ್ರಣ ಸಾಧಿಸುವಿಕೆ. ಶರಣನ ಲಕ್ಷಣವೆಂದರೆ ಪಂಚೇಂದ್ರಿಯಗಳು ತಮ್ಮ ಸ್ವಾಭಾವಿಕ ಗುಣಗಳನ್ನು ಕಳೆದುಕೊಂಡು ದೈವೀಕರಣಗೊಳ್ಳುವುದು. ಅಂಗೇಂದ್ರಿಯಗಳೆಲ್ಲ ಲಿಂಗೇಂದ್ರಿಯಗಳಾಗುವಿಕೆ. ಕಣ್ಣು ದೈವೀಕರಣ

ಗೊಂಡು ಶಿವಲಿಂಗವಾಗುವುದು. ಚರ್ಮವು ಜಂಗಮ ಲಿಂಗವಾಗುವುದು, ನಾಲಿಗೆಯು ತನ್ನ ಪಾಲಿಗೆ ಬಂದುದನ್ನು ಪ್ರಸಾದವೆಂದು ಸ್ವೀಕರಿಸಬೇಕೇ ವಿನಾ ಅದರಲ್ಲಿ ಉಪ್ಪು, ಹುಳಿ, ಖಾರ ಎಂದೆಲ್ಲ ರುಚಿಯನ್ನು ಹುಡುಕಲು ಹೋಗಬಾರದು.

ಐಕ್ಯನ ಲಕ್ಷಣವೆಂದರೆ ಜನನ -ಮರಣಗಳನ್ನು ಅಳಿದುಕೊಳ್ಳುವುದು. ಮರಣದ ಬಗೆಗಿನ ಭಯವನ್ನು ಕಳೆದುಕೊಳ್ಳುವುದು. ಶ್ರೀಗಂಧದ ವೃಕ್ಷ ಊರೊಳಗೆ ಇದ್ದರೇನು. ಅಡವಿಯೊಳಗೆ ಇದ್ದರೇನು ಪರಿಮಳ ಒಂದೇ ಎಂಬ ಧರ್ಮಪಿತರ ವಾಣಿಯಂತೆ ತಾನು ನಿರ್ಲಿಪ್ತವಾಗಿ ಲಿಂಗದೇವನ ಕರೆ ಬರುವವರೆಗೆ ಬಾಳುವನು, ಸಾವು ಬಂದಾಗ ದುಃಖಪಡದೆ ಅದನ್ನು ಸ್ವಾಗತಿಸುವನು. ಇಂಥ ಆತ್ಮಕ್ಕೆ ಮುಂದೆ ಜನನದ ಭಯವಿರದು. ಹೀಗಾಗಿ ಐಕ್ಯನು ಸದಾ ದೈವೀಭಾವವನ್ನು ಹೊಂದಿರುವನು.

510. ಭವಗೆಲ್ಲಲು ಭೃತ್ಯಾಚಾರವೇ ಸಾಧನ.

ಭಾಷೆ ವ್ರತ ವೇಷಂಗಳ ನಾನರಿಯೆನಯ್ಯಾ
ಅಘಟಿತಘಟಿತ ವರ್ತಮಾನವ ನಾನರಿಯೆನಯ್ಯಾ
ನಿಮ್ಮ ಶರಣರ ತೊತ್ತು - ಭೃತ್ಯಾಚಾರವ ಮಾಡುವೆ, ಲಿಂಗದೇವಾ
- ಬ.ವ.ದಿ. 509

ಇಂಥ ಶ್ರೇಷ್ಠವಾದ ಷಟಸ್ಥಲದ ಸಾಧನೆಯನ್ನು ಮಾಡಲಾರದ ಭಾಷೆ, ವ್ರತ, ನೇಮುಗಳನ್ನು ಅರಿಯದ ಮುಗ್ಧಭಕ್ತನು ಏನು ಮಾಡಬೇಕು? ದೀಕ್ಷೆಯನ್ನು ಪಡೆಯುವಾಗ ಗುರುವಿಗೆ ತಾನು ಆಚಾರವನ್ನು ಪಾಲಿಸುವುದಾಗಿ ಶಿಷ್ಯನು ಭಾಷೆಯನ್ನು ನೀಡಿರುವನು. ವ್ರತವನ್ನು ಕೈಗೊಳ್ಳುವನು. ನೇಮಗಳನ್ನು ಪಾಲಿಸುವ ಸಂಕಲ್ಪ ತೊಡುವನು. ಆದರೆ ಇವೆಲ್ಲವು ಅವನ ಶಕ್ತಿಗೆ ಮೀರಿದವು ಅನ್ನಿಸುತ್ತದೆ. ಅವನಿಗೆ ಅಘಟಿತ ಘಟಿತ ವರ್ತಮಾನ ಅಂದರೆ ಲೋಕಜ್ಞಾನದ ಬಗ್ಗೆಯೂ ಹೆಚ್ಚಿನ ತಿಳುವಳಿಕೆಯಿಲ್ಲ. ಹಾಗಿದ್ದರೆ ಅವನು ಏನು ಮಾಡಬೇಕು? ಶರಣರ ತೊತ್ತು ತಾನಾಗಿ ಭೃತ್ಯಾಚಾರ ಅಂದರೆ ಸೇವೆಯನ್ನು ಮಾಡಿ ಬಾಳನ್ನು ಸಾರ್ಥಕಗೊಳಿಸಿಕೊಳ್ಳಬೇಕು.

511. ಶರಣರಿಗೆ ಶರಣಾಗು

ಅಭ್ಯಾಸವೆನ್ನ ವರ್ತಿಸಿತ್ತಯ್ಯಾ, ಭಕ್ತಿ ಸಾಧ್ಯವಾಗದು,
ನಾನೇವೆನಯ್ಯಾ?
ನಾ ನಿಮ್ಮ ಮನಂಬೊಗುವನಕ್ಕ ನೀವೆನ್ನ ಮನಂಬೊಗುವನ್ನಕ್ಕ!
ಕಾಯಗುಣಂಗಳ ಕಳೆದವರಿಗೆ ಶರಣೆಂಬೆ, ಲಿಂಗದೇವಾ. - ಬ.ವ.ದೀ. 509

ವ್ಯಕ್ತಿಗಳು ದೀಕ್ಷೆ ಪಡೆದು ಪೂಜೆ ಮಾಡುವಾಗ ಮೊದಮೊದಲಿಗೆ ಶ್ರದ್ಧೆಯಿಂದ ಉತ್ಸಾಹದಿಂದ ಮಾಡುವರು. ಬರುಬರುತ್ತ ಅದೊಂದು ಯಾಂತ್ರಿಕ ಕ್ರಿಯೆಯಾಗಿ ಅಭ್ಯಾಸ ಬಲದಿಂದ ಪೂಜೆಯನ್ನು ಮಾಡುವರೇ ವಿನಾ ತಮ್ಮ ಮನಸ್ಸನ್ನು ಪೂಜೆಯಲ್ಲಿ ತೊಡಗಿಸುವುದಿಲ್ಲ. ಇಂಥ ಮಾನಸಿಕ ಸ್ಥಿತಿ ಇರುವಾಗ ನಾನು ಏನು ಮಾಡಲಿ? ಎಂದು ಸಾಧಕರು ಚಟಪಟಿಸುತ್ತಾರೆ. ನಿಜವಾದ ಸಿದ್ಧಿ ಏನೆಂದರೆ ಭಕ್ತನ ಮನಸ್ಸು ಸಂಪೂರ್ಣವಾಗಿ ದೇವನಲ್ಲಿ ನೆಲೆಸಿರಬೇಕು, ದೇವನ ಅನುಗ್ರಹವು ಭಕ್ತನ ಮನವನ್ನು ತುಂಬಬೇಕು. ಇಂಥಾ ಮಾನಸಿಕ ಸ್ಥಿತಿಯನ್ನು ಪಡೆದವರಿಗೆ, ಶರೀರ ಗುಣಗಳನ್ನು ಕಳೆದುಕೊಂಡ ಮಹಾಮಹಿಮರಿಗೆ ನಾನು ಶರಣೆಂದು ಸುಖಿಯಾಗಿರುತ್ತೇನೆ ಎನ್ನುತ್ತಾರೆ ಗುರು ಬಸವಣ್ಣನವರು. ಧಾರ್ಮಿಕ ರಂಗದಲ್ಲಿ ಅನೇಕ ಜನರು ಯಾಂತ್ರಿಕವಾಗಿ, ಅಭ್ಯಾಸ ಬಲದಿಂದ ಪೂಜಾದಿ ಕ್ರಿಯೆಗಳನ್ನು

ಮಾಡುತ್ತಿರುತ್ತಾರೆ. ಆದರೆ ನಿಜ ಜ್ಞಾನಿಗಳು ಭಕ್ತಿಪೂರ್ವಕವಾಗಿ, ಶರಣಾಗತ ಮನೋಭಾವದಿಂದ ಮನಸ್ಸನ್ನು ದೇವನಲ್ಲಿ ತೊಡಗಿಸಿ ಆರಾಧಿಸುತ್ತಾರೆ. ಅಂಥವರಿಗೆ ಪರಮಾತ್ಮನ ಅನುಗ್ರಹ ಸದಾ ಇರುತ್ತದೆ. ಅಂಥವರು ಕಾಯಗುಣಗಳನ್ನು ಕಳೆದುಕೊಂಡು ಪವಿತ್ರಾತ್ಮರಾಗಿರುತ್ತಾರೆ. ಅಂಥವರಿಗೆ ಶರಣೆಂದು ಎಲ್ಲರೂ ಶುದ್ಧವಾಗಬೇಕು ಎಂಬುದೇ ಈ ವಚನದ ಮರ್ಮ.

512. ಅವಗುಣಿಗಳ ಒಡನಾಟ ಬೇಡ

ತನು ಸಾರಾಯರ, ಮನ ಸಾರಾಯರ, ಜ್ಞಾನಸಾರಾಯರ
ತೋರಯ್ಯಾ, ನಿಮ್ಮ ಧರ್ಮ
ಭಾವಸಾರಾಯರ ಭಕ್ತಿಸಾರಾಯರ
ತೋರಯ್ಯಾ, ನಿಮ್ಮ ಧರ್ಮ
ಲಿಂಗದೇವಯ್ಯಾ,
ನಿಮ್ಮನರಿಯದವಗುಣಿಗಳ
ತೋರದಿರಯ್ಯಾ, ನಿಮ್ಮ ಧರ್ಮ. - ಬ.ವ.ದೀ. 510

ತನು ಸಾರಾಯರು, ದೇಹದ ಶಕ್ತಿ ಸಂಪತ್ತನ್ನು ಆರೋಗ್ಯವನ್ನು ಕಾಪಾಡಿಕೊಂಡು ತನುವಿನಿಂದ ಇನ್ನಿತರರ ಸೇವೆ ಮಾಡುವವರು. ಮನಸಾರಾಯರು ಮನಸ್ಸಿನಲ್ಲಿ ಸದ್ಭಾವವನ್ನು ತುಂಬಿಕೊಂಡು ದೇವನನ್ನು ಮನ ತುಂಬಿ ಅರ್ಚಿಸುತ್ತ, ಇತರರ ಲೇಸನ್ನು ಬಯಸುವವರು; ಜ್ಞಾನ ಸಾರಾಯರು, ಜ್ಞಾನವನ್ನು ತುಂಬಿಕೊಂಡು ಅದನ್ನು ಇನ್ನಿತರರಿಗೂ ಹಂಚುತ್ತಾ ಸಮಾಜವನ್ನು ಪರಿವರ್ತಿಸುವವರು - ಇಂಥವರನ್ನು ನನಗೆ ತೋರಯ್ಯ. ನಿಮ್ಮ ಧರ್ಮ ಎಂದು ಗುರು ಬಸವಣ್ಣನವರು ಲಿಂಗದೇವನಲ್ಲಿ ಬೇಡುತ್ತಾರೆ. ಭಾವ ಸಾರಾಯರು, ಸದ್ಭಾವ ಸಂಪದವನ್ನು ತುಂಬಿಕೊಂಡು ಎಲ್ಲ ಜೀವಾತ್ಮರ ಲೇಸನ್ನು ಬಯಸುವವರು; ಭಕ್ತಿ ಸಾರಾಯರು, ಭಕ್ತಿ ಎಂಬ ಸಂಪತ್ತನ್ನು ಹೊಂದಿ ದೇವನಲ್ಲಿ ಅನನ್ಯ ಶರಣಾಗತಿ ಹೊಂದಿದವರು; ಇಂಥವರನ್ನು ನನಗೆ ತೋರಿಸು. ಲಿಂಗದೇವಾ, ನಿಮ್ಮ ಅರಿಯದೆ ಇರುವವರು, ನಂಬದೇ ಇರುವವರು ಅವಗುಣಿಗಳೇ ಸರಿ; ಅಂಥವರನ್ನು ನನಗೆ ತೋರಿಸದಿರು ಎಂದು ಕರ್ತನಲ್ಲಿ ಗುರು ಬಸವಣ್ಣನವರು ಬೇಡುತ್ತಾರೆ.

ಇಲ್ಲಿ ಒಂದು ಪ್ರಶ್ನೆ ಏಳುತ್ತದೆ. ದೇವರನ್ನು ಅರಿಯದವರು, ನಂಬದವರು ಅವಗುಣಿಗಳು ಹೇಗೆ? ಎಷ್ಟೋ ನಾಸ್ತಿಕರು ಬಹಳ ಗುಣವಂತರು, ಪರೋಪಕಾರಿಗಳು ಆಗಿರುತ್ತಾರೆ. ಅವರನ್ನು ಗುಣಹೀನರು ಎನ್ನಲಾಗುವುದೆ? ಗುರು ಬಸವಣ್ಣನವರ ಪ್ರಕಾರ ದೇವರನ್ನು ನಂಬದವರು ಗುಣ ಹೀನರೇ ಸರಿ! ಏಕೆಂದರೆ, ಕೃತಜ್ಞತೆ ಎಂಬುದು ಉದಾತ್ತ ಗುಣ. ಸೃಷ್ಟಿಯನ್ನು ಮಾಡಿದ, ಮಾನವ ಜನ್ಮವನ್ನು ನೀಡಿದ ದೇವರಲ್ಲೇ ನಂಬಿಕೆ ಇಲ್ಲದುದು ಅವಗುಣ ಎಂದೆನ್ನುತ್ತಾರೆ ಅವರು. ಈ ವಚನದ ಮತ್ತೊಂದು ಸಂದೇಶವೇನೆಂದರೆ ವ್ಯಕ್ತಿತ್ವ ಪರಿಪೂರ್ಣತೆ ಯಾರಲ್ಲಿದೆ ಎಂದರೆ, ಶರೀರದ ಸದೃಢತೆ, ಮನಸ್ಸಿನ ಜ್ಞಾನಸಂಪತ್ತು, ಸದ್ಭಾವ ತುಂಬಿದ ಹದುಳಿಗ ಹೃದಯ, ಕರ್ತನಲ್ಲಿ ಶರಣಾಗತಿ ಹೊಂದಿ ಭಕ್ತಿ ಎಂಬ 5 ಸಂಪತ್ತು ಇದ್ದರೆ ಅದು ಪರಿಪೂರ್ಣ ವ್ಯಕ್ತಿತ್ವವಾಗುವುದು.

513. ಮಹಾಂತರ ಲಕ್ಷಣ

ಸಂಚಲವಿಲ್ಲದ, ಭಕ್ತಿವಂಚನೆಯಿಲ್ಲದ ಮಹಾಂತರ ತೋರಾ,
ತನುಶುಚಿ ಮನ ಶುಚಿಗಳ ತೋರಾ
ಇಂತಪ್ಪ ಲಿಂಗೈಕ್ಯರ ತೋರಿ ಬದುಕಿಸು, ಲಿಂಗದೇವಾ. - ಬ.ವ.ದೀ. 511

ಅತ್ತಿತ್ತ ಮನಸ್ಸು ಹರಿಯುವಂಥ ಚಂಚಲತೆ ಇಲ್ಲದ, ತನು ಮನ ಧನದಿಂದ ಮಾಡುವ ಭಕ್ತಿಯಲ್ಲಿ ವಂಚಕತನವಿರದ ಮಹಾಂತರನ್ನು ನನಗೆ ತೋರಿಸು. ಆಚಾರದಿಂದ ತನುವನ್ನು ಶುದ್ಧಗೊಳಿಸಿಕೊಂಡ ಪವಿತ್ರಾತ್ಮರನ್ನು ನನಗೆ ತೋರಿಸು. ಲಿಂಗದೇವಾ, ನಿನ್ನೊಡನೆ ಭಾವ ಸಾಮರಸ್ಯವನ್ನು ಸಾಧಿಸಿದವರನ್ನು ತೋರಿಸಿ, ನನ್ನನ್ನು ಸ್ಫೂರ್ತಿಗೊಳ್ಳುವಂತೆ ಮಾಡು, ಎಂದು ದೇವನಲ್ಲಿ ಗುರು ಬಸವಣ್ಣನವರು ಬೇಡುತ್ತಾರೆ.

514. ಶರಣ ವಿರಹ

ಕಾಮಸಂಗವಳಿದು ಅನುಭಾವಸಂಗದಲುಳಿದವರ ಅಗಲಲಾರೆನು;
ಶಿವಂಗೆ ಮಿಗೆ ಒಲಿದವರನು ನಾನಗಲಲಾರೆನು, ಕಾಣಾ,
ಲಿಂಗದೇವಾ. — ಬ.ವ.ದೀ. 512

ಅನುಭವ ಮಂಟಪವು ಜ್ಞಾನಿಗಳು, ಅನುಭಾವಿಗಳು ಆದ ಶರಣರ ದಿವ್ಯ ಸಂಗಮವಾಗಿತ್ತು. ಅನೇಕರು ಸ್ವಭಾವತಃ ನಿರ್ವಿಕಾರ ಸ್ಥಿತಿಯನ್ನು ಪಡೆದವರು. ಜಾಗ್ರತ, ಸ್ವಪ್ನ, ಸುಷುಪ್ತಿಯಲ್ಲೂ ಕಾಮವಾಸನೆ ಯಳಿದು ಸದಾ ದೇವನ ನೆನಪಿನಲ್ಲಿ ಉಳಿದ ಪಾವನಾತ್ಮರು. ಅವರು ಸದಾ ಕಾಲ ತತ್ವಚಿಂತನೆ ಮಾಡುವವರು. ಕೆಲವು ಕಾಲ ಸುಗಂಧವನ್ನು ತುಂಬಿಕೊಂಡ ಗಾಳಿ ಸುಳಿಯುವಂತೆ ಸುಳಿದು ಪುನಃ ಒಂದೆಡೆ ಸ್ಥಗಿತಗೊಂಡು ನಿಲ್ಲದೆ ಸಂಚಾರಕ್ಕೆ ತೊಡಗುತ್ತಿದ್ದರು. ಅಂಥವರನ್ನು ಬೀಳ್ಕೊಡಲು ಗುರು ಬಸವಣ್ಣನವರಿಗೆ ಬಹಳ ಸಂಕಟ. ಅಂಥ ಶರಣ ವಿರಹವನ್ನು ಈ ವಚನದಲ್ಲಿ ತೋಡಿಕೊಂಡಿದ್ದಾರೆ. 'ದೇವನಿಗೆ ಒಲಿದವರನ್ನು ನಾನು ಅಗಲಲಾರೆ, ನನಗೆ ಅತೀವ ದುಃಖವಾಗುತ್ತದೆ.' ಎಂದು ಇಲ್ಲಿಹೇಳಿದ್ದಾರೆ.

ಇನ್ನೊಂದು ಚಿತ್ರಣವನ್ನೂ ನಾವು ಊಹಿಸಬಹುದು. ಗುರು ಬಸವಣ್ಣನವರಿಗೆ, ಅವರು ವರ್ಣಾಂತರ ವಿವಾಹ ಮಾಡಿಸಿದ್ದಕ್ಕಾಗಿ ಗಡಿಪಾರು ಶಿಕ್ಷೆಯಾಗಿದೆ. ಅವರನ್ನು ಬೀಳ್ಕೊಡಲು ಬಂದು, ಶರಣರೆಲ್ಲ ದುಃಖತಪ್ತರಾಗಿ ನಿಂತಿದ್ದಾರೆ. ಗುರು ಬಸವಣ್ಣನವರಿಗೆ ದುಃಖವು ತುಂಬಿ ಬಂದಿದೆ. ಅಧಿಕಾರವನ್ನು ತೊರೆದುದಕ್ಕಲ್ಲ, ಶರಣರನ್ನು ಅಗಲಬೇಕಲ್ಲಾ ಎಂದು. ಆಗ ಈ ವಚನವನ್ನು ಹೇಳಿರಲೂಬಹುದು. 'ಕಾಮಸಂಗವಳಿದು ಅನುಭಾವ ಸಂಗದಲ್ಲಿ ಉಳಿದ ಇಂಥ ಪವಿತ್ರಾತ್ಮರಾದ ಶರಣರನ್ನು ಅಗಲಲಾರೆನು.' ಎಂದು.

515. ಶರಣ ಪ್ರೇಮಿ

ಭಕ್ತಿರತಿಯ ವಿಕಳತೆಯ ಯುಕುತಿಯನೇನ ಬೆಸಗೊಂಬಿರಯ್ಯಾ?
ಕಾಮಿಗುಂಟೆ ಲಜ್ಜೆ ನಾಚಿಕೆ?
ಕಾಮಿಗುಂಟೆ ಮಾನಾಪಮಾನವು?
ಲಿಂಗದೇವನ ಶರಣರಿಗೊಲಿದ ಮರುಳನನೇನ ಬೆಸಗೊಂಬಿರಯ್ಯಾ?
— ಬ.ವ.ದೀ. 513

ಭಕ್ತಿಯ ತೀವ್ರತೆ ಹೆಚ್ಚಿದಾಗ ಅದೂ ಒಂದು ರೀತಿಯ ಮಾನಸಿಕ ವಿಕಳತೆಗೆ ಒಯ್ಯುತ್ತದೆ. ತೀವ್ರಗೊಂಡ ಭಕ್ತಿರತಿಯ ಬಗೆಯನ್ನು ಏನು ಕೇಳುವಿರಿ? ಕಾಮವು ಉತ್ಕಟ ಸ್ಥಿತಿಗೆ ಏರಿದಾಗ ಆ ವ್ಯಕ್ತಿಗೆ ನಾಚಿಕೆ ಎನ್ನುವುದೇ ಇರದು. ಮಾನ ಹೋಗುತ್ತದೆ ಅಪಮಾನವಾಗುತ್ತದೆ ಎಂಬ ಪ್ರಜ್ಞೆಯೇ ಇರದು. ಅದೇ ರೀತಿ ಲಿಂಗದೇವನ ಶರಣರನ್ನು ಅತೀವವಾಗಿ ಪ್ರೀತಿಸುತ್ತ ಹುಚ್ಚಾಗಿರುವ ನನ್ನನ್ನು ಏನು ಕೇಳುವಿರಿ?

"ಕಾಮಾತುರಾಣಾಂ. ನ ಭಯಂ ನಲಜ್ಜಾ" ಎಂಬ ಮಾತಿದೆ. ಕಾಮ(ಪ್ರೇಮ)ದ ಉತ್ಕಟತೆ ತೀವ್ರನಾದವನು ಬಹಿರಂಗದ ಪ್ರಜ್ಞೆಯೇ ಇಲ್ಲದಂತೆ ವರ್ತಿಸುವನು. ಇದಕ್ಕೊಂದು ಉತ್ತಮ ದೃಷ್ಟಾಂತವಿದೆ.

ಒಮ್ಮೆ ರಾಜಾ ಅಕಬರನು ವಾಯುವಿಹಾರಕ್ಕೆ ಹೋಗಿರುತ್ತಾನೆ. ಪ್ರಾರ್ಥನೆಯ ಸಮಯವಾಗುತ್ತದೆ. ವನದಲ್ಲಿ ಒಂದು ವಸ್ತ್ರ ಹಾಸಿಕೊಂಡು ನಮಾಜಿಗೆ ತೊಡಗುತ್ತಾನೆ. ಆಗ ಓರ್ವ ಮಹಿಳೆ ಉದ್ವೇಗದಿಂದ ನಡೆದುಹೋಗುತ್ತಿರುತ್ತಾಳೆ. ಆಕೆಯ ಗಂಡ ಬಹಳ ವರ್ಷಗಳ ಹಿಂದೆ ದೂರದ ದೇಶಕ್ಕೆ ವ್ಯಾಪಾರಕ್ಕೆಂದು ಹೋದವನು ಈಗ ವಾಪಸ್ಸು ಬರುತ್ತಿರುವುದಾಗಿ ಸುದ್ದಿ ಬಂದಿರುತ್ತದೆ. ಹರ್ಷಾತಿರೇಕದಿಂದ ಧಾವಿಸಿ ಗಂಡನನ್ನು ಕಾಣಲು ಹೋಗುವಾಗ ಆಕೆಯ ಬಟ್ಟೆಯು ದಾರಿಯ ಪಕ್ಕ ಕುಳಿತ ನಮಾಜ್ ಮಾಡುತ್ತಿದ್ದ ಅಕಬರನಿಗೆ ಬಡಿಯುತ್ತದೆ. ಅವನಿಗೆ ಬಹಳ ಕೋಪ ಬರುತ್ತದೆ. ಅವಳು ವಾಪಸ್ಸು ಬಂದಾಗ ಕೋಪಾವಿಷ್ಟನಾಗಿ ಕೇಳುತ್ತಾನೆ, ನಾನು ಪ್ರಾರ್ಥನೆ ಮಾಡುತ್ತಲಿರುವಾಗ ನಿನ್ನ ಬಟ್ಟೆ ತಗುಲಿಸಿ ಹೋದುದಕ್ಕೆ ಯಾವ ಶಿಕ್ಷೆ ಕಾದಿದೆ ಗೊತ್ತೆ? ಅವಳಿಗೆ ತನ್ನ ತಪ್ಪಿನ ಅರಿವಾಯಿತು. ಆದರೆ ತಕ್ಷಣ ಕೇಳಿದಳು. "ಮಹಾರಾಜಾ, ನಾನು ಸಾಮಾನ್ಯ ಲೌಕಿಕಳು. ಬಹಳ ವರ್ಷಗಳ ನಂತರ ಗಂಡನು ಬರುತ್ತಿದ್ದಾನೆ ಎಂದು ಕಾಣಲು ಹೊರಟ ನನಗೆ ನೀವು ಕಾಣಲಿಲ್ಲ. ಆದರೆ, ಸಾಕ್ಷಾತ್ ಸೃಷ್ಟಿಕರ್ತನ ಪ್ರಾರ್ಥನೆ ಮಾಡುತ್ತಿದ್ದ ನಿಮಗೆ ನಾನು ಬಟ್ಟೆ ತಗುಲಿಸಿದುದು ಹೇಗೆ ಕಂಡಿತು?" ಅಕಬರ ನಾಚಿ ನೀರಾದ.

ಈ ದೃಷ್ಟಾಂತದ ಮರ್ಮವೇನೆಂದರೆ, ಕಾಮ ಪ್ರೇಮ ಕೋಪ ಮುಂತಾದ ಭಾವನೆಗಳಿಂದ ಉದ್ರಿಕ್ತನಾದ ವ್ಯಕ್ತಿಗೆ ಬಹಿರಂಗದ ಪ್ರಜ್ಞೆ ಇರುವುದಿಲ್ಲ. ಅದೇ ರೀತಿ ಭಕ್ತಿರತಿಯ ನಿರ್ಭರತೆ ಉಂಟಾದಾಗಲೂ ಲಜ್ಜೆ, ನಾಚಿಕೆ ಇರದು. ಶರಣರು ಅಥವಾ ಸಾಧಕರು ದೇವರನ್ನು ಪೂಜಿಸುವಲ್ಲಿ ಮತ್ತು ಮಹಾತ್ಮರ ಒಡನಾಟ ಬಯಸುವಲ್ಲಿಯೂ ಈ ಉತ್ಕಟತೆಯನ್ನು ತೋರುತ್ತಾರೆ. ಅಕ್ಕ ಮಹಾದೇವಿಯು ಪೂಜಾನಂದದಲ್ಲಿ ಮೈಮರೆಯುವಲ್ಲಿ, ಜಂಗಮರನ್ನು ಕರೆಸಿ ಅನುಭಾವಗೋಷ್ಠಿ ಮಾಡುವಲ್ಲಿಯೂ ಈ ಉತ್ಕಟತೆಯನ್ನು ಕಾಣುತ್ತೇವೆ.

ಒಲುಮೆ ಒಚ್ಚತವಾದವರು ಕುಲಛಲವನರಸುವರೆ?
ಮರುಳುಗೊಂಡವರು ಲಜ್ಜೆ ನಾಚಿಕೆಯ ಬಲ್ಲರೆ?
ಚನ್ನಮಲ್ಲಿಕಾರ್ಜುನಗೊಲಿದವರು ಲೋಕಾಭಿಮಾನವ
ಬಲ್ಲರೇ ಮರುಳೆ?

ಮೀರಾಬಾಯಿಯು ಕೃಷ್ಣನನ್ನು ಪತಿ ಎಂದು ಆರಾಧಿಸುವುದು ಲೋಕದ ಕಣ್ಣಿಗೆ ಹುಚ್ಚಿನಂತೆ ತೋರುತ್ತದೆ. ಅವಳು ಸಂತರ ಒಡನಾಟದಲ್ಲಿ ಇರುವುದು ಅವರ ರಾಜಮನೆತನಕ್ಕೆ ಕುಂದೆಂದು ಮನೆಯವರು ಭಾವಿಸುತ್ತಾರೆ. ಸಾಕ್ಷಾತ್ ಶರಣ ಪ್ರೇಮಿ ಬಸವಣ್ಣನವರೇ ಈ ಶರಣ ಪ್ರೇಮಕ್ಕಾಗಿ ವಿಡಂಬಿಸಲ್ಪಟ್ಟಿರುವಾಗ ಇನ್ನು ಮಹಿಳೆಯರಾದ ಅಕ್ಕಮಹಾದೇವಿ, ಮೀರಾಬಾಯಿ ಮುಂತಾದವರನ್ನು ಸುಮ್ಮನೇ ಬಿಡುವರೆ? ಅಂಥವರನ್ನು ಈ ವಚನದಲ್ಲಿ ಧರ್ಮಪಿತರು ಕೇಳುತ್ತಾರೆ, 'ಶರಣರ ಸಾಂಗತ್ಯಕ್ಕಾಗಿ ಹುಚ್ಚನಾಗುವ ನನ್ನನ್ನು ಏನು ಕೇಳುತ್ತೀರಿ?' ಎಂದು. ಇದರರ್ಥ, 'ನನ್ನ ಮನಸ್ಥಿತಿಯನ್ನು ನೀವಾರೂ ಅರ್ಥಮಾಡಿ ಕೊಳ್ಳಲಾರಿರಿ' ಎಂಬುದೇ ಆಗಿದೆ.

516. ಅನುಭಾವ

ಇಂದು ಹುಟ್ಟಿದ ಕೂಸಿಂಗೆ ಇಂದೆ ಜವ್ವನವಾಯಿತ್ತಯ್ಯಾ,
ಆ ಕೂಸು ಬೀದಿಯಲ್ಲಿ ಒತ್ತೆಗೊಳಲು ನಿಂದಿತ್ತಯ್ಯಾ.
ಇದರ ಸಂಗಸುಖದನುಭಾವವನು
ಲಿಂಗದೇವ ತಾನೆ ಬಲ್ಲ. - ಬ.ವ.ದೀ. 514

ಇಂದು ಹುಟ್ಟಿದ ಮಗುವಿಗೆ ಇಂದೇ ಯೌವ್ವನವು ಪ್ರಾಪ್ತಿಯಾಗಿದೆ. ಇದು ಸಾರ್ವಜನಿಕವಾಗಿ ಒತ್ತೆಗೊಳ್ಳಲು ಸಿದ್ಧವಾಗಿದೆ. ಇದರ ಸಂಗಸುಖದ ಅನುಭಾವವನ್ನು ಲಿಂಗದೇವನೇ ಬಲ್ಲ.

ಬೆಡಗಿನ ವಚನದಂತೆ ಇರುವ ಈ ವಚನವನ್ನು ತಮಗೇ ಅನ್ವಯಿಸಿಕೊಂಡು ಗುರು ಬಸವಣ್ಣನವರು ಬರೆದಿರಬಹುದು ಎನಿಸುತ್ತದೆ. ಅದೊಂದು ದಿನ ಬಸವರಸರು ಗುರು ಬಸವಲಿಂಗರಾದ ದಿವಸ. ಹಿಂದಿನ ರಾತ್ರಿ ಸಂಗಮೇಶ್ವರನು ಕನಸಿನಲ್ಲಿ ಕಾಣಿಸಿಕೊಂಡು, ಬಿಜ್ಜಳರಾಯನಿಪ್ಪ ಮಂಗಳವೇಡೆಗೆ ಹೋಗು, ಎಂದು ಆಜ್ಞಾಪಿಸಿದ್ದಾನೆ. ಆಗ ದುಃಖಿತರಾಗಿ ಬಸವರಸರು ಪ್ರಲಾಪಿಸುವಾಗ ಸಂಗಮೇಶ್ವರನು 'ಶುದ್ಧಾಂಗನಾಗಿ ಬಂದು ಕುಳ್ಳಿರು, ನಾವೇ ನಿನಗೆ ಅನುಗ್ರಹಿಸುವೆವು' ಎಂದಂತೆ ಮರುದಿವಸ ಬೆಳಗಿನ ಜಾವ, ತಮ್ಮ ಹೃತ್ಕಮಲದೊಳು ಚೆಂದ (ಇಷ್ಟ)ಲಿಂಗಕ್ಕೆ ಕರಕಮಳವನಾಂತು ಕುಳಿತಿರುವಾಗ ಅದ್ಭುತವಾದ ಬೆಳಕೊಂದು ಅವತೀರ್ಣವಾಗುತ್ತದೆ. ಈ ಮೊದಲೇ ಸಿದ್ಧಪಡಿಸಿ ಇಟ್ಟುಕೊಂಡ ಇಷ್ಟಲಿಂಗದೊಳಗೆ ಆ ಬೆಳಕು ಅಡಗುತ್ತದೆ. ದಿಟ್ಟಿಸಿ ನೋಡುತ್ತಾ ಆನಂದಿಸುತ್ತಾರೆ. ಆಗ ಬರೆದಿರಬಹುದಾದ ವಚನವಿದು ಎನಿಸುತ್ತದೆ. ಅದೇ ಆಗ ಬೆಳಕು ಇಳಿದು ಸರ್ವಾಂಗವನ್ನು ವ್ಯಾಪಿಸಿ (ಇಂದು ಹುಟ್ಟಿದ ಕೂಸಿಂಗೆ) ದೇವನ ಅನುಗ್ರಹವಾಗಿದೆ. ಇಷ್ಟಲಿಂಗವನ್ನು ದಿಟ್ಟಿಸಿ ನೋಡುತ್ತಲಿರುವಾಗ ಅಪಾರವಾದ ದಿವ್ಯಾನುಭವ ಆಗುತ್ತಲಿದೆ (ಇಂದೇ ಜವ್ವನವಾಯಿತ್ತು.) ಈ ಅನುಭವಕ್ಕೆ ಸಾಧನವಾದ ಇಷ್ಟಲಿಂಗವು ಬೀದಿಯಲ್ಲಿ ಒತ್ತೆಗೊಳಲು ನಿಂದಿತ್ತು - ಧರಿಸಿದ ಎಲ್ಲರಿಗೂ ದಿವ್ಯಾನುಭವ ನೀಡಲು ಸಿದ್ಧವಾಗಿದೆ. ಇದು ಎಲ್ಲರ ಆಸ್ತಿ. ಇಂಥ ಇಷ್ಟಲಿಂಗದ ದೃಷ್ಟಿಯೋಗ ಅಥವಾ ಅನುಸಂಧಾನದಿಂದ ಒದಗುವ ಸಂಗ ಸುಖದ ಅನುಭಾವವನು ಲಿಂಗದೇವನೇ ಬಲ್ಲ ಎಂದು ಗುರು ಬಸವಣ್ಣನವರು ಉದ್ಗರಿಸುತ್ತಾರೆ.

ಈ ವಚನದಲ್ಲಿ ಇನ್ನೊಂದು ಅರ್ಥವನ್ನೂ ಊಹಿಸಬಹುದು. ಚಿನ್ಮಯಜ್ಞಾನಿ ಚನ್ನಬಸವಣ್ಣನವರನ್ನು ಕುರಿತಾಗಿ ಈ ವಚನವು ಇರಬಹುದು ಎನಿಸುತ್ತದೆ. ಅದೊಂದು ದಿನ ಬಾಲಕ ಚನ್ನಬಸವಣ್ಣನವರು ಗುರು ಬಸವಣ್ಣನವರ ಬಳಿಗೆ ಬಂದು ದೀಕ್ಷೆ ನೀಡಲು ಪ್ರಾರ್ಥಿಸುತ್ತಾರೆ. ಅವರು 'ಓಹೋ ನಾನಾರಿಗೂ ಉಪದೇಶವ ಮಾಡಲಮ್ಮೆ' ಎನ್ನುತ್ತಾರೆ. "ನಾನು ತಾಯಿಯ ಗರ್ಭದಲ್ಲಿ ಇರುವಾಗಲೇ ತಾವು ಲಿಂಗಧಾರಣೆ ಮಾಡಿರುವ ಕಾರಣ ನೀವೇ ನನಗೆ ಗುರು - ಈಗ ಲಿಂಗದೀಕ್ಷೆಯನ್ನು ಮಾಡಿರಿ." ಎಂದು ವಿನಂತಿಸಿದ ಪ್ರಕಾರ ಮಂತ್ರೋಪದೇಶ ಮಾಡುತ್ತಾರೆ. ದೀಕ್ಷಾನಂತರ ಇಷ್ಟಲಿಂಗ ತ್ರಾಟಕವನ್ನು ಏಕಾಗ್ರತೆಯಿಂದ ಮಾಡಿ ಚನ್ನಬಸವಣ್ಣನವರು ದಿವ್ಯಾನುಭವವನ್ನು ಪಡೆಯುತ್ತಾರೆ. ಅದನ್ನು ಕಂಡು ಹರ್ಷಿಸಿದ ಗುರು ಬಸವಣ್ಣನವರು, ಇಂದು ಹುಟ್ಟಿದ (ದೀಕ್ಷೆ ಪಡೆದ) ಕೂಸಿಂಗೆ, ಇಂದೇ ಜವ್ವನವಾಯಿತ್ತು ಎನ್ನುತ್ತಾರೆ. ಮತ್ತು ಸಾಮಾನ್ಯವಾಗಿ ಸಾಧಕರು ಏಕಾಂತದಲ್ಲಿ ಕುಳಿತು ಅಧ್ಯಾತ್ಮಿಕ ಆನಂದ ಪಡೆಯಲು ಯತ್ನಿಸಿದರೆ, ಚನ್ನಬಸವಣ್ಣನವರು ಎಲ್ಲರ ಎದುರಿಗೇ ಕುಳಿತು ಸಮಾಧಿ ಸ್ಥಿತಿಗೆ ಏರಿದ್ದಾರೆ. ಇದನ್ನು, ಆ ಕೂಸು ಬೀದಿಯಲ್ಲಿ ಒತ್ತೆಗೊಳಲು ನಿಂದಿತ್ತು ಎಂದು ಹೇಳಿದ್ದಾರೆ. ಇಂಥ ವ್ಯಕ್ತಿಯ (ಚನ್ನಬಸವಣ್ಣ) ಸಂಗಸುಖದ ಅನುಭಾವವನು ಲಿಂಗದೇವನೇ ಬಲ್ಲ! ಎಂದು ಗುರು ಬಸವಣ್ಣನವರು ಆನಂದ - ಆಶ್ಚರ್ಯಗಳಿಂದ ಉದ್ಗರಿಸಿದ್ದಾರೆ.

ಹುಬ್ಬಳ್ಳಿಯಲ್ಲಿ ಗುರು ಬಸವಣ್ಣನವರ ಅಮೃತ ಶಿಲಾ ಮೂರ್ತಿಯ ಪ್ರತಿಷ್ಠಾಪನೆ

ಹುಬ್ಬಳ್ಳಿಯ ಉಣಕಲ್ ಗ್ರಾಮದ ವ್ಯಾಪ್ತಿಯಲ್ಲಿರುವ ವಿಶ್ವೇಶ್ವರ ನಗರದಲ್ಲಿ ಹುಬ್ಬಳ್ಳಿ-ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರದಿಂದ ಪಡೆದ ನಿವೇಶನದಲ್ಲಿ ರಾಷ್ಟ್ರೀಯ ಬಸವ ದಳವು ಈಗಾಗಲೇ ಬಸವ ಮಂಟಪವನ್ನು ನಿರ್ಮಿಸಿ, ನಂತರ ಪ್ರಸಾದ ನಿಲಯ, ಪಾಕ ಗೃಹಗಳನ್ನು ಕಟ್ಟಿಸಿತ್ತು. ಇದೀಗ 26-9-2010ರಂದು ಗುರು ಬಸವಣ್ಣನವರ ಅಮೃತ ಶಿಲಾ ಪುತ್ಥಳಿಯನ್ನು ಸ್ಥಾಪಿಸುವ ಕಾರ್ಯಕ್ರಮವನ್ನು ಹಮ್ಮಿಕೊಂಡಿತು. ದಿ. 26-9-2010ರಂದು ಸಹಸ್ರ ಬಸವ ಮಂತ್ರ ಪಠಣದೊಡನೆ ಮೂರ್ತಿಯ ಪ್ರತಿಷ್ಠಾಪನೆ ನೆರವೇರಿತು. ಪೂಜ್ಯ ಶ್ರೀ ಮಹಾಜಗದ್ಗುರು ಮಾತೆ ಮಹಾದೇವಿಯವರು ಮೂರ್ತಿಯ ಪ್ರತಿಷ್ಠಾಪನೆ ಮಾಡಿ, ಚಿತ್ಕಳೆ ತುಂಬಿದರು.

ಸಂಸತ್ ಸದಸ್ಯರಾದ ಪ್ರಹ್ಲಾದ್ ಜೋಷಿಯವರು ಕಾರ್ಯಕ್ರಮ ಉದ್ಘಾಟನೆ ಮಾಡಿದರು. ಕರ್ನಾಟಕ ರಾಜ್ಯ ರಾ.ಬ.ದಳದ ಅಧ್ಯಕ್ಷರಾದ ವೀರಣ್ಣ ಲಿಂಗಾಯತ್ ಬಸವ ಧ್ವಜಾರೋಹಣ ಮಾಡಿದರು. ಹುಬ್ಬಳ್ಳಿ ರಾ.ಬ.ದಳದ ಅಧ್ಯಕ್ಷರಾದ ಕಲ್ಯಾಣಪ್ಪ ಪರಮಾದಿ ಪ್ರಾಸ್ತಾವಿಕ ನುಡಿ ಆಡಿದರು. ಶರಣ. ಎಸ್.ಬಿ. ಜೋಡಳ್ಳಿ ಎಲ್ಲರನ್ನು ಸ್ವಾಗತಿಸಿದರು.

ಪೂಜ್ಯ ಶ್ರೀ ಸದ್ಗುರು ಮಾದೇಶ್ವರ ಸ್ವಾಮಿಗಳಿಗೆ ಗುರುವಂದನೆ

ಪೂಜ್ಯ ಶ್ರೀ ಸದ್ಗುರು ಮಾದೇಶ್ವರ ಸ್ವಾಮಿಗಳು ಕೂಡಲ ಸಂಗಮದ ಬಸವ ಧರ್ಮ ಪೀಠದ ಪ್ರಧಾನ ವ್ಯವಸ್ಥಾಪಕರು. ಒಬ್ಬನೇ ಮಗ, ವೈರಾಗ್ಯ ಜೀವನ ಬಯಸಿ ಮನೆ ಬಿಟ್ಟರು, ಬೆಂಗಳೂರಿನ ಬಸವ ಮಂಟಪಕ್ಕೆ ಬಂದರು. ಅವರ ಸಾಧಕ ಪ್ರವೃತ್ತಿ ನೋಡಿ ಕೂಡಲ ಸಂಗಮಕ್ಕೆ ಕಳಿಸಿಕೊಟ್ಟೆವು. ದಿನನಿತ್ಯ ಬಸವ ಧ್ಯಾನ ಮಂಟಪದಲ್ಲಿ ಇಷ್ಟಲಿಂಗಾರ್ಚನೆ, ಬಸವಾರ್ಚನೆಗಳನ್ನು ನಿಷ್ಠೆಯಿಂದ ಮಾಡುತ್ತ ಅವರಲ್ಲಿ ತಪಃಶಕ್ತಿ ವೃದ್ಧಿಯಾಯಿತು. ಈ ಮಧ್ಯೆ ಜಂಗಮ ದೀಕ್ಷೆಯನ್ನು ಕೊಟ್ಟೆವು.

ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆ ತಾಲ್ಲೋಕಿನ ಹಳ್ಳದ ಮಾದಹಳ್ಳಿಯ ಶರಣ. ನಾಗರಾಜಪ್ಪನವರ ಏಕೈಕ ಪುತ್ರರಾದ ಸ್ವಾಮೀಜಿಯನ್ನು ವಾಪಸ್ಸು ಕರೆಸಿಕೊಳ್ಳಲು ತಾಯಿತಂದೆಯವರು ಹರಸಾಹಸವನ್ನೇ ಮಾಡಿದರೂ ಸ್ವಾಮೀಜಿ ಸೋಲಲಿಲ್ಲ. ತಮ್ಮ ಮಗ ತಿರುಗಿ ಬಾರದ ಹಾದಿಯಲ್ಲಿ ಸಾಗಿದ್ದಾರೆಂದು ಅರಿತುಕೊಂಡ ನಾಗರಾಜಪ್ಪ ಗುರುವಾದ ತಮ್ಮ ಪೂರ್ವಾಶ್ರಮದ ಪುತ್ರರಿಗೆ ಅದ್ದೂರಿಯಾದ ಗುರುವಂದನೆಯನ್ನು ದಿ. 28-9-2010ರಂದು ತಮ್ಮ ಊರಿನಲ್ಲಿ ಏರ್ಪಡಿಸಿ, 25000 ರೂಗಳ ಗುರುಕಾಣಿಕೆಯನ್ನು ಬಸವ ಧರ್ಮ ಪೀಠಕ್ಕೆ ಸಲ್ಲಿಸಿದರು.

ಧಾರವಾಡದಲ್ಲಿ ಬಸವ ಜ್ಯೋತಿ ಸಮಾರೋಪ

ಧಾರವಾಡ ರಾಷ್ಟ್ರೀಯ ಬಸವ ದಳದವರು ಶ್ರಾವಣ ಮಾಸ ಪೂರ್ತಿ ಬಹಳ ಉತ್ಸಾಹದಿಂದ ಮನೆಗಳನ್ನು ಸಂದರ್ಶಿಸಿ ಬಸವ ಜ್ಯೋತಿ ಕಾರ್ಯಕ್ರಮವನ್ನು ನೆರವೇರಿಸಿದ್ದಲ್ಲದೆ, ದಿ. 25-9-2010ರಂದು ಸಮಾರೋಪ ಸಮಾರಂಭವನ್ನು ಏರ್ಪಡಿಸಿದ್ದರು. ಪೂಜ್ಯ ಮಾತಾಜಿಯವರ ಸನ್ನಿಧಿಯಲ್ಲಿ ನಡೆದ ಈ ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಶರಣ. ಜಿ.ಎಸ್.ಪಾಟೀಲರು ಆಗಮಿಸಿದ್ದರು. ಶ್ರಾವಣದ ನಂತರ ಪ್ರತಿ ಶಿವ(ಸೋಮ)ವಾರದಂದು ಒಬ್ಬ ಶರಣರ ಮನೆಯಲ್ಲಿ ಬಸವ ಜ್ಯೋತಿ ಕಾರ್ಯಕ್ರಮವನ್ನು ವರ್ಷಪೂರ್ತಿ ನಡೆಸುವುದಾಗಿ ಪ್ರತಿಜ್ಞೆ ಸ್ವೀಕರಿಸಿದರು.

****

ಧರ್ಮಕ್ಷೇತ್ರ ಕೂಡಲಸಂಗಮದಲ್ಲಿ
2011 ರ ಜನವರಿ 11, 12, 13, 14, 15ರಂದು ನಡೆಯಲಿರುವ
ಇಪ್ಪತ್ನಾಲ್ಕನೆಯ ಶರಣಮೇಳದ ಅಂಗವಾಗಿ
ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿ ಅವರ
ಪ್ರಚಾರ ಪ್ರವಾಸ ಕಾರ್ಯಕ್ರಮ

ಆತ್ಮೀಯ ಶರಣ ಬಂಧುಗಳಿಗೆ, ಬಸವ ಸ್ಮರಣಪೂರ್ವಕ ಶುಭ ಹಾರ್ೈಕೆಗಳು.

ಸೃಷ್ಟಿಕರ್ತ ಲಿಂಗದೇವ ಮತ್ತು ಧರ್ಮಕರ್ತ ಬಸವಣ್ಣನವರ ಕೃಪೆಯಿಂದ ನಾವಿತ್ತ ಕ್ಷೇಮ. ನಿಮ್ಮ ಕ್ಷೇಮ ಹಾರೈಸುತ್ತೇವೆ. ಶರಣ ಬಂಧುಗಳ ಹಿಗ್ಗಿನ ಉತ್ಸವ, 2011ನೆಯ ಇಸವಿಯ ದಿ.11ರಿಂದ 15ರವರೆಗೆ ನಡೆಯುವ 24ನೆಯ ಶರಣ ಮೇಳದ ಪ್ರಚಾರಾರ್ಥ ಮತ್ತು ಸಂಘಟನೆ, ಸಂದರ್ಶನದ ದೃಷ್ಟಿಯಿಂದ ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿಯವರ ಪ್ರವಾಸ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಈಗ ತಮ್ಮ ಊರಿಗೆ ಅವರು ಆಗಮಿಸುವ ದಿನಾಂಕದ ವೇಳಾ ಪಟ್ಟಿಯನ್ನು ಕಳಿಸಲಾಗಿದೆ. ಈ ದಿನಾಂಕಕ್ಕೆ ಕಾರ್ಯಕ್ರಮ ಏರ್ಪಡಿಸುವ ಬಗ್ಗೆ ತಮ್ಮ ಸಾಧ್ಯಾಸಾಧ್ಯತೆಯನ್ನು ಬೇಗನೆ ನಮಗೆ ದೂರವಾಣಿಯ ಮೂಲಕ ಅಥವಾ ಪತ್ರ ಮುಖೇನ ತಿಳಿಸಬೇಕು. ಬೆಂಗಳೂರು ವಿಳಾಸಕ್ಕೆ ವ್ಯವಹರಿಸಬೇಕು. ಕಾರಣಾಂತರದಿಂದ ನಿಮಗೆ ಕಾರ್ಯಕ್ರಮ ಏರ್ಪಡಿಸಲು ಆಗದೆ ಇದ್ದರೆ ಅಥವಾ ಇನ್ನೂ ಹೆಚ್ಚುವರಿ ದಿನಾಂಕಗಳು ಬೇಕಾಗಿದ್ದರೆ ತಕ್ಷಣ ತಿಳಿಸಿರಿ.

ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿಯವರು ಸಂದರ್ಶಿಸಲಿರುವ ಈ ಸಮಯವನ್ನು ಸಂಘಟನೆಗಾಗಿ ಬಳಸಿಕೊಳ್ಳುವುದೇ ಅಲ್ಲದೆ ದೀಕ್ಷಾ ಕಾರ್ಯಕ್ರಮಗಳನ್ನು ಏರ್ಪಡಿಸಲೂಬಹುದು. 2011 ನೆಯ ಇಸವಿಯ 24 ನೆಯ ಶರಣ ಮೇಳದ ಸರ್ವತೋಮುಖ ಯಶಸ್ಸಿಗೆ ತಾವು ಸಹಕರಿಸುವಿರಾಗಿ ನಂಬಿದ್ದೇವೆ.

ವಾಸ್ತವ್ಯ : ಬೆಂಗಳೂರು

10-10-2010

ಪೂಜ್ಯ ಶ್ರೀಮನ್ ನಿರಂಜನ
ಮಹಾ ಜಗದ್ಗುರು ಮಾತೆ ಮಹಾದೇವಿ
ಕಾರ್ಯಾಧ್ಯಕ್ಷೆ, ಶರಣ ಮೇಳ ಉತ್ಸವ ಸಮಿತಿ

ವಿ.ಸೂ : ಕಾರಣಾಂತರದಿಂದ ದಿನಾಂಕಗಳಲ್ಲಿ ಊರುಗಳಲ್ಲಿ ಬದಲಾವಣೆ ಆಗಬಹುದು. ಅದನ್ನು ತಿಳಿಸಲಾಗುವುದು.

ಕ್ರ.ಸಂ.	ದಿನಾಂಕ	ವಾರ	ಊರಿನ ಹೆಸರು
1.	01-11-2010	ಶಿವ(ಸೋಮ)ವಾರ	ವಿಜಯಪುರ
2.	02-11-2010	ಬಸವ(ಮಂಗಳ)ವಾರ	ಹೊಸಕೋಟೆ
3.	03-11-2010	ಚೆನ್ನ(ಬುಧ)ವಾರ	ಆಟ್ನೂರು
4.	04-11-2010	ಪ್ರಭು(ಗುರು)ವಾರ	ತುರುವೇಕೆರೆ
5.	05-11-2010	ಮಾತೃ(ಶುಕ್ರ)ವಾರ	ತುರುವೇಕೆರೆ
6.	06-11-2010	ಶರಣ(ಶನಿ)ವಾರ	ಚಿಕ್ಕಮಗಳೂರು
7.	07-11-2010	ದೇವ(ಶನಿ)ವಾರ	ಚಿಕ್ಕಮಗಳೂರು
8.	08-11-2010	ಶಿವ(ಸೋಮ)ವಾರ	"
9.	09-11-2010	ಬಸವ(ಮಂಗಳ)ವಾರ	"
10.	10-11-2010	ಚೆನ್ನ(ಬುಧ)ವಾರ	ಭದ್ರಾವತಿ
11.	11-11-2010	ಪ್ರಭು(ಗುರು)ವಾರ	"
12.	12-11-2010	ಮಾತೃ(ಶುಕ್ರ)ವಾರ	ಶಿವಮೊಗ್ಗ
13.	13-11-2010	ಶರಣ(ಶನಿ)ವಾರ	"
14.	14-11-2010	ದೇವ(ಭಾನು)ವಾರ	ದಾವಣಗೆರೆ
15.	15-11-2010	ಶಿವ(ಸೋಮ)ವಾರ	ಹಾವೇರಿ
16.	16-11-2010	ಬಸವ(ಮಂಗಳ)ವಾರ	ರಾಣೆಬೆನ್ನೂರು
17.	17-11-2010	ಚನ್ನ(ಬುಧ)ವಾರ	ಚಿತ್ರದುರ್ಗ
18.	18-11-2010	ಪ್ರಭು(ಗುರು)ವಾರ	ಚಳ್ಳಕೆರೆ
19.	19-11-2010	ಮಾತೃ(ಶುಕ್ರ)ವಾರ	ದೊಡ್ಡಉಳ್ಳಾರ್ತಿ
20.	20-11-2010	ಶರಣ(ಶನಿ)ವಾರ	ಚಿತ್ರನಾಯಕನ ಹಳ್ಳಿ
21.	21-11-2010	ದೇವ(ಭಾನು)ವಾರ	ಬಳ್ಳಾರಿ
22.	22-11-2010	ಶಿವ(ಸೋಮ)ವಾರ	"
23.	23-11-2010	ಬಸವ(ಮಂಗಳ)ವಾರ	ಶಿರಗುಪ್ಪ
24.	24-11-2010	ಚನ್ನ(ಬುಧ)ವಾರ	ರಾಯಚೂರು
25.	25-11-2010	ಪ್ರಭು(ಗುರು)ವಾರ	ಶಕ್ತಿನಗರ
26.	26-11-2010	ಮಾತೃ(ಶುಕ್ರ)ವಾರ	ಗಂಗಾವತಿ
27.	27-11-2010	ಶರಣ(ಶನಿ)ವಾರ	ಕೊಪ್ಪಳ
28.	28-11-2010	ದೇವ(ಭಾನು)ವಾರ	"
29.	29-11-2010	ಶಿವ(ಸೋಮ)ವಾರ	"
30.	30-11-2010	ಬಸವ(ಮಂಗಳ)ವಾರ	ಹುಬ್ಬಳ್ಳಿ
31.	01-12-2010	ಚನ್ನ(ಬುಧ)ವಾರ	ಧಾರವಾಡ
32.	02-12-2010	ಪ್ರಭು(ಗುರು)ವಾರ	ಮುಮ್ಮಿಗಟ್ಟಿ
33.	03-12-2010	ಮಾತೃ(ಶುಕ್ರ)ವಾರ	ಅವರಾದಿ
34.	04-12-2010	ಶರಣ(ಶನಿ)ವಾರ	ಸವದತ್ತಿ
35.	05-12-2010	ದೇವ(ಭಾನು)ವಾರ	"
36.	06-12-2010	ಶಿವ(ಸೋಮ)ವಾರ	ಬೈಲಹೊಂಗಲ
37.	07-12-2010	ಬಸವ(ಮಂಗಳ)ವಾರ	"
38.	08-12-2010	ಚನ್ನ(ಬುಧ)ವಾರ	ಬೆಳಗಾವಿ
39.	09-12-2010	ಪ್ರಭು(ಗುರು)ವಾರ	"

40.	10-12-2010	ಮಾತೃ(ಶುಕ್ರ)ವಾರ	ಸಂಕೇಶ್ವರ
41.	11-12-2010	ಶರಣ(ಶನಿ)ವಾರ	ಗಡಿಹಿಂಗ್ಲಾಜ್
42.	12-12-2010	ದೇವ(ರವಿ)ವಾರ	ಗೋಕಾಕ್
43.	13-12-2010	ಶಿವ(ಸೋಮ)ವಾರ	,,
44.	14-12-2010	ಬಸವ(ಮಂಗಳ)ವಾರ	,,
45.	15-12-2010	ಚನ್ನ(ಬುಧ)ವಾರ	,,
46.	16-12-2010	ಪ್ರಭು(ಗುರು)ವಾರ	ಶೇಗುಣಸಿ
47.	17-12-2010	ಮಾತೃ(ಶುಕ್ರ)ವಾರ	ಖಿವಟಕೊಪ್ಪ
48.	18-12-2010	ಶರಣ(ಶನಿ)ವಾರ	ತಾಂವಶಿ
49.	19-12-2010	ದೇವ(ಭಾನು)ವಾರ	ಅಥಣಿ
50.	20-12-2010	ಶಿವ(ಸೋಮ)ವಾರ	ಅಡಹಳಹಟ್ಟಿ
51.	21-12-2010	ಬಸವ(ಮಂಗಳ)ವಾರ	ಕನಮಡಿ
52.	22-12-2010	ಚನ್ನ(ಬುಧ)ವಾರ	,,
53.	23-12-2010	ಪ್ರಭು(ಗುರು)ವಾರ	ಚಡಚಣ
54.	24-12-2010	ಮಾತೃ(ಶುಕ್ರ)ವಾರ	ಬಿಜಾಪುರ
55.	25-12-2010	ಶರಣ(ಶನಿ)ವಾರ	ಗುಲಬರ್ಗಾ (ಬ.ಮಂಟಪ ನೃಪತುಂಗ ಕಾಲನಿ ಸಂಜೆ-6)
56.	26-12-2009	ದೇವ(ಭಾನು)ವಾರ	ಗುಲಬರ್ಗಾ(ಬ.ಮಂಟಪ ಮಹಾಂತನಗರ)
57.	27-12-2009	ಶಿವ (ಸೋಮ)ವಾರ	ಯಲಮಾಮಿಡಿ
58.	28-12-2009	ಬಸವ(ಮಂಗಳ)ವಾರ	ಉದಗೀರ
59.	29-12-2009	ಚನ್ನ(ಬುಧ)ವಾರ	ಬೀದರ
60.	30-12-2010	ಪ್ರಭು(ಗುರು)ವಾರ	ಕೋಳಾರ(ಕೆ)
61.	31-12-2010	ಮಾತೃ(ಶುಕ್ರ)ವಾರ	ಜಹಿರಾಬಾದ್
62.	01-01-2011	ಶರಣ(ಶನಿ)ವಾರ	ಹೈದ್ರಾಬಾದ್
63.	02-01-2011	ದೇವ(ರವಿ)ವಾರ	,,
64.	03-01-2011	ಶಿವ(ಸೋಮ)ವಾರ	,,
65.	04-01-2011	ಬಸವ(ಮಂಗಳ)ವಾರ	,,
66.	05-01-2011	ಚನ್ನ(ಬುಧ)ವಾರ	,,
67.	06-01-2011	ಪ್ರಭು(ಗುರು)ವಾರ	,,
70.	07-01-2011	ಮಾತೃ(ಶುಕ್ರ)ವಾರ	,,
71.	08-01-2011	ಶರಣ(ಶನಿ)ವಾರ	,,
72.	09-01-2011	ದೇವ(ಭಾನು)ವಾರ	,,
73.	10-01-2011	ಶಿವ(ಸೋಮ)ವಾರ	ಕೂಡಲ ಸಂಗಮಕ್ಕೆ ಪ್ರಯಾಣ



ದಿ.28-9-2010 ಹಳ್ಳದ ಮಾದಹಳ್ಳಿಯಲ್ಲಿ ನಡೆದ ಗುರುವಂದನ ಸಮಾರಂಭದ ಉದ್ಘಾಟನೆ ಪೂಜ್ಯ ಶ್ರೀ ಸದ್ಗುರು ಮಾದೇಶ್ವರ ಸ್ವಾಮಿಗಳಿಂದ



ಗಾಂಧಿ ಜಯಂತಿ ನಿಮಿತ್ತ ಕುಂಬಳಗೋಡಿನ ಬಸವ ಗಂಗೋತ್ರಿಯಲ್ಲಿ ಮೂಲವ್ಯಾಧಿ ಚಿಕಿತ್ಸಾ ಶಿಬಿರದ ಉದ್ಘಾಟನೆ ಡಾ॥ ಮೆಹಬೂಬ ಖಾನ್ ಅವರಿಂದ





Kalyana Kirana kannada Monthly October 2010 RNI No.19988/70, CPMG/KA/BGW-50 WPP(W)-17R Pages 32, Rs.10.00, Posted at Bangalore GPO on 3,10,20 of Every Month